# ಬಿ. ಎ., ಐಚ್ಛಿಕ ಕನ್ನಡ ಮೊದಲನೆ ಮತ್ತು ಎರಡನೆಯ ಸೆಮಿಸ್ಟರ್ ಪಠ್ಯ

# ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಪ್ರಾಚೀನ ಕಾವ್ಯ


ಪ್ರಧಾನ ಸಂಪಾದಕರು

ಡಾ. ಎಂ.ಜಿ. ಮಂಜುನಾಥ

ಸಂಪಾದಕರು

ಡಾ. ಎಸ್.ಎಲ್. ಮಂಜುನಾಥ

ಪ್ರೊ. ಬೊಮ್ಮೇಗೌಡ

ಸೂರ್ಯಕೀರ್ತಿ



ಬೆಂಗಳೂರು ನಗರ ವಿಶ್ವವಿದ್ಯಾಲಯ

ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು

Kannada Saahithya Charitre mathu Pracheena Kavya - A Prescribed Textbook for Optional Kannada I and II semester BA- Bengalure City University, Bengaluru-1. Chief Editor: Dr. M.G. Manjuntha, Editor: Dr. S.L. Manjunatha, Prof. Bomme Gowda, Suryakeerthy.

**@: ಕಾಯ್ದಿರಿಸಿದೆ.**

**ಸಲಹಾ ಸಮಿತಿ:**

**ಡಾ. ಎಂ.ಜಿ. ಮಂಜುನಾಥ**
**ಡಾ. ಎಸ್.ಎಲ್. ಮಂಜುನಾಥ**
**ಡಾ. ಬಿ. ಎಸ್.ಪೂರ್ಣಿಮ**
**ಡಾ. ಸುವರ್ಣ ಸಂಗಣ್ಣ ಹುಡೇದ**
**ಪ್ರೊ. ಬೊಮ್ಮೇಗೌಡ**
**ಡಾ. ಮನೋನ್ಮನಿ**
**ಡಾ. ಪಿ. ಬೆಟ್ಟೇಗೌಡ**
**ಡಾ. ಎನ್. ಆರ್. ಚಂದ್ರೇಗೌಡ**

ಪ್ರಥಮ ಪ್ರಕಟಣೆ: 2024

# ಕನ್ನಡ ಸಾಹಿತ್ಯ ಚರಿತ್ರೆ –1
# ಮತ್ತು
# ಪ್ರಾಚೀನ ಕಾವ್ಯ ಭಾಗ–1

**(5 ಕ್ರೆಡಿಟ್, ವಾರಕ್ಕೆ 6 ಗಂಟೆಗಳು ಬೋಧನಾವಧಿ)**

## ಕನ್ನಡ ಸಾಹಿತ್ಯ ಚರಿತ್ರೆ –1

**ಅ) ಕನ್ನಡ ಸಾಹಿತ್ಯೋದಯದ ಹಿನ್ನೆಲೆ:**

1. ಕನ್ನಡ ಸಾಹಿತ್ಯದ ಪ್ರಾಚೀನತೆ
2. ಕನ್ನಡದ ಪ್ರಾಚೀನ ಶಾಸನಗಳು
   ಅ. ಹಲ್ಮಿಡಿ ಶಾಸನ, ಆ. ಬಾದಾಮಿಯ ಕಪ್ಪೆ ಅರಭಟ್ಟನ ಶಾಸನ

**ಆ) ಪಂಪ ಪೂರ್ವ ಯುಗ:**

1. ಈ ಯುಗದ ಕೆಲವು ಪ್ರಮುಖ ಕವಿಗಳು
2. ಕವಿರಾಜಮಾರ್ಗ
3. ಕವಿರಾಜ ಮಾರ್ಗದ ಮಹತ್ವ
4. ವಡ್ಡಾರಾಧನೆ

**ಇ) ಪಂಪ ಯುಗ:**

**1. ಈ ಯುಗದ ವೈಶಿಷ್ಟ್ಯಗಳು**

**2. ರತ್ನ ತ್ರಯರು:**

ಪಂಪ
ರನ್ನ
ಪೊನ್ನ

**ಈ) ಇತರೆ ಪ್ರಮುಖ ಕವಿಗಳು:**

ಚಾವುಂಡರಾಯ, 1ನೇ ನಾಗವರ್ಮ, ದುರ್ಗಸಿಂಹ, ನಾಗಚಂದ್ರ, ನಯಸೇನ

| | |
|---|---|
| ಕನ್ನಡ ಸಾಹಿತ್ಯ ಚರಿತ್ರೆ | – 40 ಅಂಕಗಳಿಗೆ |
| ಕಾವ್ಯ ಭಾಗ | – 40 ಅಂಕಗಳಿಗೆ |
| ಆಂತರಿಕ | – 20 ಅಂಕಗಳು |
| ಒಟ್ಟು– | 100 ಅಂಕಗಳು |

## ಪ್ರಾಚೀನ ಕಾವ್ಯ ಭಾಗ –1

## ಪರಿವಿಡಿ

1. **ಭರತ–ಬಾಹುಬಲಿ ಸಂಘರ್ಷ – ಪಂಪ**
2. **ದುರ್ಯೋಧನ ವಿಲಾಪಂ – ರನ್ನ**
3. **ಮಹಾಶ್ವೇತೆಯ ಸಂದರ್ಶನ –ನಾಗವರ್ಮ**
4. **ಅಬ್ಧಿಯುಮೊರ್ಮೆ ಕಾಲವಶದಿಂ ಮರ್ಯ್ಯಾದೆಯಂ ದಾಂಟದೇ –ನಾಗಚಂದ್ರ**

## 1. ಭರತ–ಬಾಹುಬಲಿ ಸಂಘರ್ಷ

**– ಪಂಪ**

ಎನ್ನಣುಗದಮ್ಮನಿಲ್ಲದೆ
ಬಿನ್ನನೆ ಸಾಮ್ರಾಜ್ಯಮಿನಿತುಮಾದೆರಕಮುಮ
ತ್ಯುನ್ನತಿಯಲ್ತೆನಗಾತಂ
ಮುನ್ನೆರಗದೊಡೆಂದು ಬೆಸಸಿಯಟ್ಟಿದನೆನ್ನಂ

ವ॥ ಎನೆ ಭರತ ಚಕ್ರವರ್ತಿಯ ದೂತನೆಂಬುದುಂ ಬಾಹುಬಲಿ ಕುಮಾರಂ
ಕೋಪಗರ್ಭಸ್ಮಿತಂ ಬೆರಸು
ಧನವೆಂಬುದು ವಿಭುಗೆ ಯಶೋ
ಧನಮದನಿಂತಳಿಪಿ ಕಳಿಪಿ ಕಿಡೆ ಮಾಡಿರ್ದಾ
ತನ ಪಡೆದ ಧನಮದೇತಱ
ಧನಮದಱಿಂ ನಿಧನಮೆಯ್ದಿದರ್ ಪಲರರಸರ್

ಪಿರಿಯಣ್ಣಂಗೆಱಗುವುದೇಂ
ಪರಿಭವಮೇ ಕೀೞೆ ನೆತ್ತಿಯೊಳ್ ಬಾಳಂ ನಿ
ರ್ನೆರಮೂಱೆ ಚಲದಿನೆಱಗಿಸ
ಲಿರೆ ಭರತಂಗೆಱಗುವೆರಕಮಂಜಮೆಯಲ್ತೇ

ಭರತಂ ಷಟ್‌ಖಂಡಭೂವಲ್ಲಭನೆನೆ ಸಿರಿಯಂ ಗೆಂಟರೊಳ್ ಕೇಳ್ದು ರಾಗಂ
ಬೆರಸಿರ್ಪೀ ನಣ್ಪೆ ಸಾಲ್ಗುಂ ಕರೆದೊಡೆ ಬೆಸನೇನೆಂಬ ಜೀಯೆಂಬ ದೇವಂ
ಬರಸೆಂಬಾಳೆಂಬ ದೈನ್ಯಕ್ಕೆಲವೊ ತನುವನಾನೊಡ್ಡುವಂತಾದಿದೇವಂ
ಪುರುದೇವಂ ದೇವದೇವಂ ಕುಡೆ ಪಡೆದ ನೆಲಕ್ಕಾರೊಳಂ ಪಂಥಮುಂಟೇ

ನೆಗೞ್ದೀಷಟ್‌ಖಂಡ ಭೂಮಂಡಲಮನನಿತುಮಂ ಗೆಲ್ವಖಂಡಪ್ರತಾಪಂ
ನೆಗೞ್ತಾಱುಂ ಬಲಂಗಳ್ವೆರಸೊದವಿದ ಸಂಗ್ರಾಮಸಂರಂಭದಿಂದಂ
ಬಗೆಯಂ ಪ್ರಾಣಪ್ರಿಯಸ್ತ್ರೀಜನತನಯಧನವ್ರಾತದೊಳ್ ಮಾಡದಾರ್ತಾ
ಜಿಗೆ ಬಂದೊಡ್ಡಲ್ಕೆ ಪೇೞ್ಸಂಗರನಿಕಷದೊಳೆಮ್ಮಂದಮಂ ನೀನೆ ಕಾಣ್ಬೈ

ಕಿಸುಸಂಜೆವೆರಸು ಕೞ್ತಲೆ
ಪಸರಿಸಿದಪುದೆನಿಸಿ ಕಣ್ಣ ಕೆಂಪುಂ ಭ್ರುಕುಟಿ

ಪ್ರಸರಾಂಧಕಾರಮುಂ ದೆಸೆ
ದೆಸೆಗೆಸೆದುವು ಬಾಹುಬಲಿನೃಪಾಸ್ಥಾಯಿಕೆಯೊಳ್

ವ|| ಅನ್ನೆಗಂ ಚಕ್ರವರ್ತಿಯ ದೂತಂ ಸಾಕೇತಪುರಮನೆಯ್ದೆವಂದಾಸ್ಥಾನ ಮಂಟಪದೊಳ್
ಇರ್ದ ಚಕ್ರವರ್ತಿಯಂ ಕಂಡು ಪೊಡೆಮಟ್ಟು
ನಿನಗೀ ಷಟ್ಖಂಡ ಭೂಮಂಡಲಮೆಱಗಿದುದೇಂ ಸಾಲದೇ ಬೇಡದುದ್ಘ
ತ್ತನೊಳಿನ್ನೇನೆಂದು ದೇವರ್ಕಡೆಗಣಿಸಿರೆ ಸೌದರ್ಯಮಂ ಕಾದ ಪೆಂಪೀ
ವನಧಿದ್ವೀಪಾಂತರಾಳ ಕ್ಷಿತಿಯೊಳೆಸಗುವಾಕ್ಷೇಪಮಂ ಮಾಣ ನೀಂ ಕ್ರೋ
ಧನನಾಗಲ್ ನಿನ್ನ ತಮ್ಮಂ ನಿನಗೆಱಗನಿದಂ ನಂಬು ರಾಜಾಧಿರಾಜಾ

ವ|| ತಱುವಾಯಿಂ ದೃಷ್ಟಿಯುದ್ಧ ಜಲಯುದ್ಧ ಮಲ್ಲಯುದ್ಧದೊಳ್ ಬಾಹುಬಲಿ ಕುಮಾರಂ
ಭರತ ಚಕ್ರವರ್ತಿಯಂ ಗೆಲಲ್ ಆಗಳ್

ಧರೆಯ್ ಪರ್ಬಿರ್ದುದೀ ಬಾಹುಬಲಿ ನೃಪಯಶೋದುಂದುಭಿಧ್ವಾನವೆಂಬಂ
ತಿರೆ ದೇವಾನೀಕಿನೀದುಂದುಭಿರವಮಮರೀವೃಂದ ಮಾಂಗಲ್ಯಗೇಯ
ಸ್ವರದೊಳ್ ಕೈಗೂಡಿ ಪೊಣ್ಮುತ್ತಿರೆ ಮುದಿತಸುರಾನಂದ ಬಾಷ್ಪೋದ ಬಿಂದೂ
ತ್ಕರಮೆಂಬಂತಾಗೆ ತಂದತ್ತರಲ ಮಱೆಗಳಂ ಪುಷ್ಪಮೇಘಪ್ರತಾನಂ

ತನಗಲ್ಲದುದಂ ಮಾಡಿದ
ನಿನಿಸಂ ಚಕ್ರೇಶನೆಂಬ ಕುಲವೃದ್ಧರ ಭೂ
ವನಿತಾಧೀಶರ ನುಡಿಗ
ಳ್ಗೆ ನಾಣ್ಚಿದಂ ಭರತರಾಜನವನತಮಕುಟಂ

ಕಳೆದಿಡುವುದೆ ಕಷ್ಟಂ ಭೂ
ತಳರಾಜ್ಯ ವಿಮೋಹಮಚಿರರುಚಿಸಂಚಳಮಿಂ
ತಳವುಗಿಡಿಸಿದುದು ಮನುಕುಲ
ತಿಳಕನುಮಂ ಖಳಮಹೀಶರುಳಿದವರಳವೇ

ಸೋದರರೊಳ್ ಸೋದರರಂ
ಕಾದಿಸುವುದು ಸುತನ ತಂದೆಯೆಡೆಯೊಳ್ ಬಿಡುದು
ತ್ಪಾದಿಸುವುದು ಕೋಪಮನಳ
ವೀ ದೊರೆತೆನೆ ತೊಡರ್ವುದೆಂತು ರಾಜ್ಯಶ್ರೀಯೊಳ್

ಇನಿಯವು ಮೊದಲೊಳ್ ನಂಜಿನ

ಪನಿವೊಲ್ ಬಟಿಕೆಯ್ದೆ ಮುಳಿದು ಕೊಂದಿಕ್ಕುವುವಿಂ
ತೆನೆಯೆನೆ ವಿಷಯ ಸುಖಾಸ್ವಾ
ದನದೊಳ್ ಲಂಪಟರಿದೇಕೆಯೋ ನರಪಶುಗಳ್

ಕಿಡು ವೊಡಲ ಕಿಡುವ ರಾಜ್ಯದ
ಪಡೆಮಾತುಗೊಳಲ್ಕಮೆನ್ನ ಮೆಯ್ಯಗಿದಪುದೀ
ಗಡೆ ಜೈನದೀಕ್ಷೆಯಂ ಕೊಂ
ಡಡಿಗೆಱಗಿಸುವೆಂ ಸಮಸ್ತಸುರಸಮುದಯಮಂ

ಎಂದಿಂತು ಬಗೆದು ಭರತನ
ನೆಂದಂ ಚಕ್ರೇಶ ಸಿಗ್ಗನುಟಿ ಮುಳಿಸಂ ನೀ
ನೆಂದಿಂಗಂ ಬಿಸುಡೀ ತ
ಮ್ಮಂದಿರೊಳಿಂತಿಂತು ಕಟ್ಟುವರ್ಪುದು ಪೆಂಪೇ

ನಿನ್ನೀ ಬೆಸಸಿದ ಚಕ್ರಮ
ದೆನ್ನೀ ದೇಹಾದ್ರಿಯಂ ಗೆಲಲ್ ನೆಱೆಯದು ನೀಂ
ಬಿನ್ನನಿದೇಕಿರ್ಪೆಯದೆಂ
ತೆನ್ನ ಗೆಲಲ್ ವಜ್ರಗಿರಿಯನಾರ್ಕುಮೆ ವಜ್ರಂ

ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಮೀಭಟಖಡ್ಗಮಂಡಲೋ
ತ್ಪಲವನ ವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ
ವಲಯಮನಯ್ಯನಿತ್ತುದುಮನಾಂ ನಿನಗಿತ್ತೆನಿದೇವುದಣ್ಣ ನೀ
ನೊಲಿದ ಲತಾಂಗಿಗಂ ಧರೆಗಮಾಟಿಸಿದಂದು ನೆಗಟ್ತೆ ಮಾಸದೇ

ಅವಧರಿಸದೆ ನಿನ್ನೊಳ್ ಪಿರಿ
ದವಿನಯಮಂ ನೆಗಟ್ದ ದೋಷಮಂ ತಪದೊಳ್ ನೀ
ಗುವೆನಸದಾಗ್ರಹಮಂ ಬಿಸು
ಡುವುದೊರ್ಮೆಗೆ ಮಱೆವುದೆನ್ನ ದುರ್ವಿಳಸನಮಂ

ವ॥ ಎಂದು ಬಾಹುಬಲಿ ಕುಮಾರಂ ತಪಶ್ಚರಣ ನಿಶ್ಚಳನಿಶ್ಚಯ ಮನನಾದಾಗಳ್

* * *

## 2. ದುರ್ಯೋಧನ ವಿಲಾಪಂ

**– ರನ್ನ**

ಕುಂಭಸಂಭವನಂ ಪ್ರದಕ್ಷಿಣಂಗೆಯ್ದು ಬರುತ್ತುಂ ಆ ದಿಶಾಭಾಗದೊಳ್

ಅರೆ ಮುಗಿದಿರ್ದಕಣ್ಮಲರಲರ್ದಮೊಗಂ ಕಡಿವೋದ ಕಯ್ಯುಮಾ–
ಸುರತರಮಾಗೆ ಕರ್ಚಿದವುಡುಂ ಬೆರಸನ್ಯಶರಪ್ರಹಾರಜ–
ರ್ಜರಿತ ಶರೀರನಾಗಿ ನವಲೋಹಿತವಾರ್ಧಿಯೊಳಟ್ಟುಬಿಟ್ಟನಂ
ಕುರುಪತಿ ನೋಡಿ ಕಂಡನಭಿಮನ್ಯುಕುಮಾರನನಾಜಿ ವೀರನಂ॥

ಅಂತಾತನನಹಿಕೇತನಂ ನೋಡಿ
ಗುರುಪಣ್ಣಿದ ಚಕ್ರವ್ಯೂ
ಹರಚನೆ ಪೆಱರ್ಗರಿದು ಪುಗಲದಂಪೊಕ್ಕು ರಣಾ–
ಜಿರದೊಳರಿನೃಪರನಿಕ್ಕಿದನರಸುತನಿನ್ನೊರೆಗೆ
ದೊರೆಗೆ ಗಂಡರುಮೊಳರೇ॥

ಪಲರಿರ್ದುಕಾದಿದರ್ಮೆಯ್–
ಗಲಿಗಳ್ ತನ್ನೊಂದೆಮೆಯೊಳಂತವೆ ಕೊಂದಯ್
ಪಲರಂ ನಿನ್ನಂ ಪೆತ್ತಳ್
ಮೊಲೆವೆತ್ತಳೆ ವೀರ ಜನನಿ ವೆಸರಂಪೆತ್ತಳ್॥

ಅಸಮಬಲ ಭವದ್ವಿಕ್ರಮ–
ಮಸಂಭವಂಪೆಟರ್ಗೆ ನಿನ್ನನಾನಿತಂ ಪ್ರಾ–
ರ್ಥಿಸುವೆನಭಿಮನ್ಯು ನಿಜಸಾ–
ಹಸೈಕದೇಶಾನುಮರಣಮೆಮಗಕ್ಕೆ ಗಡಾ॥

ಎಂದಾತ್ಮಗತದೊಳೆ ಬಗೆದು ಅಭಿಮನ್ಯುಗೆ ಕಯ್ಗಳಂ ಮುಗಿದು ಬರುತ್ತುಂ ತನ್ನ ಮಗನಪ್ಪ ಲಕ್ಷಣಕುಮಾರನಂ ನೆನೆದು ಮನ್ಯೂದ್ಗತ ಕಠನಾಗಿ ತದಾಸನ್ನಪ್ರದೇಶದೊಳ್ಕಂಡು
ಗಳಿತಶರಮಾಯ್ತು ಹಸ್ತಂ
ಗಳಿತರಣೋತ್ಸಾಹಮಾಯ್ತು ಹೃದಯಂ ನಯನಂ
ಗಳಿತಾಶ್ರುವಾಯ್ತು ಕೌರವ–
ಕುಳತಿಲಕಂಗಾಕುಮಾರನಂ ಕಾಣಲೊಡಂ॥

ಅಂತು ಪುತ್ರ ಸ್ನೇಹಕಾತರ ಹೃದಯನಾಗಿ ಗಾಂಧಾರೀ ನಂದನಂ ಭಾನುಮತೀ ನಂದನನ
ವದನಾರವಿಂದಮಂ ನೋಡಿ
ಜನಕಂಗೆ ಜಲಾಂಜಲಿಯಂ
ತನೂಭವಂ ಕುಡುವುದುಚಿತಮದುಗೆಟ್ಟಿಗಳ್
ನಿನಗಾಂ ಕುಡುವಂತಾದುದೆ
ತನೂಜ ನೀಂಕ್ರಮ ವಿಪರ್ಯಯಂ ಮಾಡುವುದೇ॥

ಎಂದಲ್ಲಿ ನಿಲಲಾಱದಾಪ್ರದೇಶದಿಂ ತಳರ್ದು ಬರೆವರೆ ರಣದೊಳ್ಮಡಿದ ಶಲ್ಯನುಮಂ
ಸಿಂಧುರಾಜನುಮಂ ಶಕುನಿಯುಮಂ ಮತ್ತೆ ಪಲಂಬ ನೃಪತಿಗಳುಮಂ ಕಂಡು
ಶೋಕಾಕುಲೀ ಕೃತ ಚಿತ್ತನಾಗಿ

ಗುಣಿಗಳತ್ರಿಲೋಕಚೂಡಾ–
ಮಣಿಗಳ್ಕೈಲಾಸಶೈಲಕಲ್ಪಕ ಸುಭಟಾ–
ಗ್ರಣಿಗಳ್ನೆರೆದೆನ್ನಯ ಕಾ–
ರಣದಿಂದೀ ನೃಪ ಸುತರ್ಕಳಾಡಿದರೇ ॥
ಎಂದು ಪಶ್ಚಾತ್ತಾಪಂಗೆಯ್ಯ ಸಂಜಯಂ ಸಂತೈಸಿಮುಂದೊಯ್ಯ ಭೀಮಸೇನನ ಗದಾಪರಿಘ
ಪ್ರಹರಣದಿಂ ರುಧಿರ ಪ್ರವಾಹ ವಶಗತನಾಗಿರ್ದ ಯುವರಾಜನಿರ್ದೆಡೆಯಂ
ಕುರುರಾಜನೆಯ್ದೆವಂದಾಗಳ್
ಪುಡಿಯೊಳ್ಪೊರಳ್ಚಿಯುಂಮೆ–
ಯ್ಯಡಗಂಕಿಱಿಕಿಱಿದು ಕೊಱದು ತಿಂದುಂಗೊಲ್ಲಂ
ಗುಡಿದುಂ ನೆತ್ತರನೆಂತುಂ
ಹಿಡಿಂಬರಿಪು ತಣಿದನಿಲ್ಲ ದುಶ್ಯಾಸನನಂ ॥

ಎಂದು ಸಂಜಯಂ ಪೇೞ್ಕೇೞ್ಗವಿಗೇಳ್ದುಕಿಱಿದೆದೆಡೆಯಂ (ಪೋಗಿ) ತನ್ನ ತಮ್ಮನಿರ್ದಿರವಂ
ಕಂಡು ಸೈರಿಸಲಾಱದೆ

ನಿನ್ನಂಕೊಂದಂಗಡಮೊಳ–
ನಿನ್ನುಂಕೊಂದವನನಿಕ್ಕಿಕೊಲ್ಲದೆಮಾಣ್ದಾ–
ನಿನ್ನುಮೊಳೆಂಗಡಸಾಲದೆ
ನಿನ್ನಯಕೂರ್ಮೆಗಮದೆನ್ನಸೌಧರ್ಮಿಕೆಗಂ ॥

ಜನನೀಸ್ತನ್ಯಮನುಂಡೆನಾಂಬೞಕೆನೀಂಸೋಮಾಮೃತಂದಿವ್ಯಭೋ–

ಜನಮೆಂಬಿಂತಿವನುಂಡೆನಾಂಬಟಿಕೆನೀಂಬಾಲತ್ವದಿಂದೆಲ್ಲಿಯುಂ
ವಿನಯೋಲ್ಲಂಘನಮಾದುದಿಲ್ಲಮರಣಕ್ಕೆನ್ನಿಂದೆನೀಂಮುಂಚಿದಯ್
ಮೊನೆಯೊಳ್ನೂಱ್ತಡವಾಯ್ತುದೊಂದೆಡೆಯೊಳಂಹಾವತ್ಸದುಶ್ಶಾಸನಾ ॥

ಎಂದುವಿಪ್ರಳಾಪಂಗೆಯ್ದು
ಅನುಜನನೆತ್ತರನೀಂಟಿದ–
ನನೆತ್ತರಂಜೀವಸಹಿತಮೀಂಟದೆದುಯ್ಯೋ–
ಧನನೆಂಬ ಪೆಸರ್ಗೆಮುಯ್ಯಾಂ–
ಪೆನೆ ದುಶ್ಶಾಸನನಬನ್ನಮಂನೀಗುವೆನೇ ॥

ಅಲ್ಲಿಂತಳರ್ದು ಅಂತಿರ್ದ ದಿನಕರತನೂಜನಂ ರಾಜರಾಜಂನೋಡಿ ಬಾಷ್ಪವಾರಿ ಧಾರಾಪೂರಿತ ಲೋಚನನುಂ ಪಿಂಗಾಕ್ಷಂ ಕೋಪಾರುಣೀ ಕೃತ ನೇತ್ರನಾಗಿ ತನ್ನ ತಮ್ಮನ ಕಳೇಬರಮಂ ನೋಡಲಾರದೆ ಮನ್ಯೂದ್ಗತಕಂಠನುಂ ಅಸಹ್ಯಶೋಕಾನಲದಹ್ಯಮಾನಾಂತಃಕರಣನುಮಾಗಿ ಎಂದು
ಆನುಂ ದುಶ್ಶಾಸನನುಂ
ನೀನುಂ ಮೂವರೆದಲಾತನುಂ ಕೞಿದ ಬೞಿ–
ಕ್ಕಾನುಂ ನೀನೆದಲೀಗಳ್
ನೀನುಮಗಲ್ದೆತ್ತವೋದೆಯಂಗಾಧಿಪತೀ ॥

ನಿನ್ನ ಮಗಂ ವೃಷಸೇನಂ
ತನ್ನ ಮಗಂ ಸತ್ತನಣ್ಮಿ ಲಕ್ಷಣನುಂ ನೀ–
ನೆನ್ನಂ ಸಂತೈಸುವುದಾಂ
ನಿನ್ನಂ ಸಂತೈಸೆಬಂದೆನಂಗಾಧಿಪತೀ॥

ಅಱಿಯೆನಿದಂ ನಿನ್ನಿಂದಿನ
ತೆಱನಂ ನೀನೆನಗೆಯೇಕೆ ಮುಳಿದಿರ್ದೆಯೊ ಮೇಣ್
ಮಱುಮಾತು ಗುಡದೆ ರವಿಸುತ
ಮಱೆವಿಂದಿರ್ದಪೆಯೊಮೇಣ್ಬ ಅಲ್ಲಿರ್ದಪೆಯೋ ॥

ನಿನ್ನ ಕೆಳೆಯಂ ಸುಯೋಧನ–
ನಂ ನೋಡದೆ ನುಡಿಯದಪ್ಪಿಕೊಳ್ಳದೆ ಬೆಸನೇ–
ನೆನ್ನದೆ ಜೀಯೆನ್ನದೆ ದೇ–

ವೆನ್ನದೆ ಯೇಕುಸಿರದಿರ್ದೆ ಯಂಗಾಧಿಪತೀ ॥

ಅನೃತಂ ಲೋಭಂ ಭಯಮಂ–
ಬಿನಿತುಂನೀನಿರ್ದ ನಾಡೊಳಿರ್ಕುಮೆ ರವಿನಂ–
ದನ ನನ್ನಿಚಾಗಮಂ–
ಬಿನಿತರ್ಕಂ ನೀನೆ ಮೊತ್ತಮೊದಲಿಗನಾದಯ್ ॥

ಆನಱವೆಂ ಪೃಥೆಯಱಿವಳ್
ದಾನವರಿಪುವುವಱಿವನರ್ಕನಱಿವಂ ದಿವ್ಯ–
ಜ್ಞಾನಿ ಸಹದೇವನಱಿವಂ
ನೀನಾರ್ಗೆಂದಾರುಮಱಿಯರಂಗಾಧಿಪತೀ ॥

ನೀನುಳ್ಳೊಡುಂಟು ರಾಜ್ಯಂ
ನೀನುಳ್ಳೊಡೆ ಪಟ್ಟಮುಂಟು ಬೆಳ್ಗೊಡೆಯುಂಟಯ್
ನೀನುಳ್ಳೊಡುಂಟು ಪೀಟಿಗೆ
ನೀನಿಲ್ಲದಿವೆಲ್ಲಮೊಳವೆ ಅಂಗಾಧಿಪತೀ ॥

ಹರಿ ಬೇಡೆ ಕವಚಮಂ ನೀ–
ನರಿದಿತ್ತಯ್ ಕೊಂತಿಬೇಡೆ ಬೆಗಡದೆ ಕೊಟ್ಟಯ್
ಪುರಿಗಣೆಯಂ ನಿನಗೆಣೆ ಕಸ–
ವರಗಲಿಮೆಯ್ಗಲಿಯುಮಾವನಂಗಾಧಿಪತೀ ॥

ನಿನ್ನಂ ಕೊಂದ ಕಿರೀಟಿಯು–
ಮೆನ್ನಣುಗನನಿಕ್ಕಿಕೊಂದ ಭೀಮನುಮೊಳನಾ–
ನಿನ್ನುಮೊಳೆಂ ಗಡಸಾಲದೆ
ನಿನ್ನಯ ಕೂರ್ಮೆಗಮದೆನ್ನಸೌಧರ್ಮಿಕೆಗಂ ॥

ಇಂದಾನಾದೆಂಮೇಣಿನ–
ನಂದನಕೇಳ್ಪಾಂಡುತನಯರಾದರ್ನಿನ್ನಂ
ಕೊಂದುಂ ದುಶ್ಯಾಸನನಂ
ಕೊಂದುಂ ಬರ್ದುಕುವನದಾವನಂಗಾಧಿಪತೀ ॥

ಎಂದು ವಿಪ್ರಳಾಪಂಗೆಯ್ದು

ಇನಸುತನಿರವಂ ದುಶ್ಶಾ–
ಸನನಿರವಂ ಕಂಡುಮಿನ್ನುಮೆನ್ನಸುತಾಂ ನೆ–
ಟ್ಟನೆ ಪೋದುದಿಲ್ಲ ಕಲ್ಲೆರ್ದೆ–
ತನದಿಂದೆನ್ನಂತುಬರ್ದನಾವನುಮೊಳನೇ ॥

* * *

## 3. ಮಹಾಶ್ವೇತೆಯ ಸಂದರ್ಶನ

**–ನಾಗವರ್ಮ**

ಆಗಳ್ತಮ್ಮೆಡೆಗೆಯ್ತರ್ಪುದಂ ಕಂಡದೃಷ್ಟಪೂರ್ವಮಪ್ಪುದಱೆಂ
ಕಿನ್ನರದ್ವಯಮತಿಭೀತಿಯಿಂ ಪರಿಯೆ
ಪಿಡಿದಪನೀಗಳಾ ಪಿಡಿಯಲೆಯ್ದಿದನಾ ಪಿಡಿದಪ್ಪನೀಗಳಾ
ಪಿಡಿದನೆ ಕಿನ್ನರದ್ವಯಮನೆಂಬಿನೆಗಂ ಬೞಿಸಂದು ತನ್ನ ಸಂ
ಗಡದವರುಂ ಪರಿಗ್ರಹಮುಮೆಯ್ತರಲಾಱದೆ ಪಿಂದೆ ನಿಲ್ವನಂ
ಕಡುಪಿನೊಳಂದುಬಿಟ್ಟನತಿಶೀಘ್ರದೆವಾಜಿಯನಾನೃಪೋತ್ತಮಂ

ಛಲದಿಂದರಸಂ ತಾಂ ಬೆ
ನ್ನೊಳೆ ಪರಿದೆಟ್ಟೆಟ್ಟಿ ಪಿಡಿಯಲನುಗೆಯ್ವುದುಮ
ಸ್ಖಲಿತಂ ಮುಂದಣ ತಾರಾ
ಚಲಶಿಕರಮನೇಱದತ್ತು ಕಿನ್ನರಮಿಥುನಂ

ಏಕೆ ನಿರರ್ಥಕಂ ಮಗುವಿನಂದದೆ ಕೋಟಲೆಗೊಂಡೆನಕ್ಕಟಿಂ
ತೇಕೆಯೊ ಕಿನ್ನರದ್ವಯದ ಬೆಂಬೞಿಯಂ ತಗುಳುತ್ತೆ ಬಂದೆನಿಂ
ತೇಕೆಯೊ ಮೂರ್ಖನಂತೆ ಮತಿಗೆಟ್ಟನಿದಂ ಪಿಡಿದಲ್ಲಿ ಬರ್ಪುದೇಂ
ವ್ಯಾಕುಲನಾಗುತುಂ ಪಿಡಿಯದಿರ್ದೊಡೆ ಪೇೞ್ಕಿಡುವೊಂದು ವಸ್ತುವೇಂ
ಎಂದು ಚಿಂತಿಸುತುಮಿರ್ಪುದುಂ

ವಸುಧೆಯ ಬಡಗಣ ದೇಶ
ಕ್ಕೆ ಸೀಮೆಯೆನಿಪುದು ಸುವರ್ಣಪುರಮತ್ತಲ್ಲಾ
ನಿಸರಿಲ್ಲದಡವಿ ಬೞಿಕ
ತ್ತೆಸೆವುದು ಕೈಲಾಸವೆಂಬುದಾ ನಗಮಿದಿರೊಳ್

ಅಂತು ಕುದುರೆಯಂ ಮಗುೞ್ಚಿ ಮತ್ತಮಿಂತೆಂದಂ
ದಿನಲಕ್ಷ್ಮೀರಶನ್ಯೈಕಮಧ್ಯಮನೀಯಾದಂ ಭಾಸ್ಕರಂ ಶ್ರಾಂತಿಯುಂ
ಘನಮಾದತ್ತು ತುರಂಗಮಕ್ಕದಱೆನಾಂ ನೀರ್ದಾಣಮಂ ನೋಡಿ ಮೆ
ಲ್ಲನೆ ಸಾರ್ದಲ್ಲಿ ಬೞಲ್ಕೆಯಂ ಕಳೆದು ನಾಂ ಪೋಪೆಂ ಬೞಿಕ್ಕೆಂದು ವಾ

ರಿನಿವಾಸಂಗಳನಲ್ಲಿ ನಾಲ್ದೆಸೆಗಳೊಳ್ನೋಟ್ಟುಂ ಮಹೀವಲ್ಲಭಂ

ಅಂತು ನಿರೀಕ್ಷಿಸುತ್ತಾಂ ಪೋಗೆವೋಗೆ

ಎಲೆ ತಾರಾಗಂ ಹರಂ ಕಣ್ಣಿಡೆ ಕರಗಿದುದಂತಲ್ತು ರುದ್ರಾಟ್ಟಹಾಸಂ
ಜಲಮಾದತ್ತಲ್ತು ಚಂದ್ರಾತಪಮಮೃತರಸಾಕಾರಮಾಯ್ತಲ್ತು ಹೈಮಾ
ಚಲಮಂ ಭೋರೂಪದಿಂದಂ ಪರಿಣಮಿಸಿದುದಂತಲ್ತು ನೈರ್ಮಲ್ಯಶೋಭಾ ಕಲಿತಂ
ತ್ರೈಲೋಕ್ಯ ಲಕ್ಷ್ಮೀಮಣಿಮುಕುರಮೆನಲ್ ಚೆಲ್ವದಾಯ್ತಬ್ಜಷಂಡಂ

ಇದು ಮನುಜರ್ಗಗೋಚರಮೆನಿಪ್ಪ ಹರಾದ್ರಿಯ ತಟ್ಟಲಿಲ್ಲಿ ಗೇ
ಯದ ದನಿ ನುಣ್ಪು ವೆತ್ತೆಸೆಯುತಿರ್ದಪುದೀಗಳೆ ಪೋಗಿ ನೋಟ್ಪೆ ನಾ
ನಿದನೆನುತುಂ ಕುತೂಹಲಿತ ಮಾನಸನಂದು ನರೇಂದ್ರನಂದನಂ
ಕುದುರೆಯ ಬೆನ್ಗೆ ವಂದು ನಡೆದಂ ಮೃಗಸೂಚಿತ ಗೇಯಮಾರ್ಗದಿಂ

ಅಂತು ಪೋಗೆವೋಗೆ
ಇದು ಸಿದ್ಧಾಯತನಂ ಮನಂಗೊಳಿಸಿ ತೋಱುತ್ತಿರ್ಪುದಿಲ್ಲಿಂದೆ ಬಂ
ದುದು ವೀಣಾಧ್ವನಿ ತಪ್ಪದೀಯೆಡೆಯೊಳಿರ್ದಾರ್ಬಾಜಿಸುತ್ತಿರ್ದರೆಂ
ಬುದನಾಂ ನೋಡುವೆನೀಗಳೆಂದು ಮನದೊಳ್ನಿಶ್ಚೈಸುತಂ ಮೆಲ್ಲನೆ
ಯ್ದಿದನಾ ಸ್ಥಾನಮನಂದನಂತಮಹಿಮಂ ಭೂಪಾಲವಿದ್ಯಾಧರಂ

ಅಂತಿರ್ದ ಚರಾಚರ ಗುರುವಪ್ಪ ಶೂಲಪಾಣಿ ದೇವರಂ ಕಾಣ್ಬುದುಮಾಪರಮೇಶ್ವರನ ಸಕಳ ಜಗದಭೀಷ್ಟಫಲದಾಯಕಮಪ್ಪ ದಕ್ಷಿಣಾಮೂರ್ತಿಯನಾಶ್ರಯಿಸಿ

ಅಮೃತಾಂಭೋರಾಶಿಪೂರಪ್ರತಿಮ ನಿಜತಪಸ್ಸಂಚಯಂ ಪರ್ವಿತೋ ಲೋ
ಕಮನೆಂಬಂತಿರ್ದ ದೇಹಾಂಶುಗಳ ಬಳಗದಿಂ ಕಾನನಾನೀಕಮಂ ದಂ
ತಮಯಂಮಾಟ್ಪಂತೆ ತಾರಾಚಳಮನಸದಳಂ ನುಣ್ಣಿಪಂತೊರ್ವಳತ್ಯು
ತ್ತಮದಿವ್ಯಾಕಾರೆ ಕುಳ್ಳಿರ್ದತನುಹರನಾರಾಧಿಸುತ್ತಿರ್ದಳಾಗಳ್

ಅಂತುಮಲ್ಲದೆಯಂ
ಕಡೆದರೊ ಶಂಖದಿಂ ತೆಗೆದರೊ ನವಮೌಕ್ತಿಕದಿಂ ಮೃಣಾಳದಿಂ
ಪಡೆದರೊ ದಂತದಿಂದೆಸೆಯೆ ಮಾಡಿದರೊ ರುಚಿರೋಜ್ವಲಾಂಗಮಂ
ಬಿಡದಮೃತಾಂಶುರಶ್ಮಿಗಳ ಕುಂಚಿಗೆಯಿಂದಮೆ ಕರ್ಚಿ ಪಾರದಂ

ದೊಡೆದರೊ ಪೇಟೆನಲ್ಕರಮೆ ಕಣ್ಗೆಸೆದಿರ್ದುದು ರೂಪು ಕಾಂತೆಯಾ

ಪೊಳೆವೆಳನೇಸಱುಂ ತೆಗೆದ ರಶ್ಮಿಗಳಂತೆ ಮಡಲ್ತು ಕಾಂತಿಯಂ
ತಳೆದೆಳಮಿಂಚಿನೊಳ್ದಳಿರ್ಗಳಂತೆ ಕವಲ್ತು ಮೃಗಾಂಕ ಮೌಳಿ ನಿ
ರ್ಮಳ ಪದ ಭಸ್ಮರೇಣುಗಳೆನಲ್ನವಮಜ್ಜನವಾಃಕಣಂಗಳಂ
ತಳೆದು ಪೆಗಲ್ವರಂ ಬಳೆದು ರಂಜಿಸುಗುಂ ಜಡೆಗಳ ಮೃಗಾಕ್ಷಿಯಾ

ಶಿವನಾಮಾಂಕಿತಮಂ ರ
ತ್ನ ವಿರಚಿತಮನುತ್ತಮಾಂಗದೊಳ್ ಪಾದೂಯು
ಗ್ಮವನೆಸೆಯೆ ತಳೆದು ಭಕ್ತಿಯೆ
ಭವಸನ್ನಿಧಿಯಲ್ಲಿ ರೂಪುಗೊಂಡಂತಿರ್ದಳ್

ಒದವಿದ ಭಕ್ತಿಯನೀಶನ
ಹೃದಯದೊಳಿರ್ದಗಳೆನಲ್ಕೆ ನವಮೌಕ್ತಿಕ ಲಿಂ
ಗದ ನಡುವೆ ರೂಪು ಮಾರ್ತೊಳ
ಗಿದುದೆತ್ತಂ ವಿಮಲಕಮಲದಳಲೋಚನೆಯಾ

ಅತಿ ಗಂಭೀರೆಯನೂರ್ಜಿತ
ಮತಿಯಂ ನಿರ್ಮಳೆಯನಮಳಧೈರ್ಯಾದಿ ಗುಣಾ
ನ್ವಿತೆಯಂ ದೃಢಪಾಶುಪತ
ವ್ರತೆಯಂ ಕನ್ಯಕೆಯನಂದು ಕಂಡಂ ಕ್ಷಿತಿಪಂ

ದಿವ್ಯಕಾಂತೆಯ ರೂಪಸಂಪತ್ತಿಗಂ ಕಾಂತಿಗಮುಪಶಾಂತಿಗಂ ವಿಸ್ಮಯಂ ಬಟ್ಟು ನೋಡುತ್ತುಮಿರ್ದು

ಕಿನ್ನರಯುಗ್ಮಮೆತ್ತ ವನಮೆತ್ತ ಸರೋರುಹಷಂಡಮೆತ್ತ ಗೀ
ತಂ ನಯದಿಂದೆ ಬಂದೆಸೆವುದೆತ್ತ ಭವಾಲಯಮೆತ್ತ ಭೋಂಕನೀ
ಕನ್ನೆಯ ಕಾಣ್ಕೆಯೆತ್ತ ಮನುಜಂಗೆನಗೆಂದು ನರೇಂದ್ರನಂದನಂ
ತನ್ನೊಳೆ ತಾನೆ ವಿಸ್ಮಯದೆ ಭಾವಿಸುತಿರ್ದನದೊಂದು ಜಾವಮಂ

ಅಂತುಭಾವಿಸುತ್ತುಮಿರ್ದು
ಮನುಜನನೆನ್ನನೀಕ್ಷಿಸಿ ಭವಾದ್ರಿಯನೇಱದೆ ನಾಡೆ ನೋಡಿ ತೊ

ಟ್ಟನೆ ಕೊಳೆ ಮಾಯವಾಗದೆ ನಭಕ್ಕೊಗೆದಾಗಳೆ ಪೋಗದಿರ್ದೊಡೊ
ಯ್ಯನೆ ಬೆಸಗೊಳ್ವೆನಾರ್ಗೆ ಸತಿ ನೀಂ ಪೆಸರೇಂ ನಿನಗಿಂತು ತೋರ್ಪ ಜ
ವ್ವನದೊಳಗೀ ತಪಕ್ಕೆ ಗುಱಿಮಾಡಸಿದುಬ್ಬೆಗಮಾವುದೆಂಬುದಂ

ಎಂದು ಭಾವಿಸುತ್ತುಮಾ ರಮಣೀಯ ದೇವಾಯತನ ನೂತ್ನಸ್ತಂಭಮಂ ನೆಮ್ಮಿ ನಿಂದಿರ್ದು ತದಂಗನಾ ಗೀತಾವಸಾನಮಯಮಂ ಪಾರುತ್ತುಮಿರ್ಪುದುಂ

ಮೃದುಮಧುರ ವಲ್ಲಕೀಗೇ
ಯದ ದನಿ ಮಾಣಲ್ಕೆ ಗೀತದವಸಾನದೊಳು
ನ್ಮದಮಧುಕರಸ್ವನಂ ಪೊ
ಣ್ಮದ ಕುಮುದಿನಿಯಂತೆ ಕಾಂತೆ ಕಣ್ಗೆಸೆದಿರ್ದಳ್

ಆನಂದರಮಾಕೆ ತ್ರೈಲೋಕ್ಯರಕ್ಷಾಮಣಿಯಂ ಪ್ರದಕ್ಷಿಣೀಕರಣಪೂರ್ವಕಂ ನಮಸ್ಕರಿಸಿ

ಸ್ವಾಗತಮೇ ನಿನಗೆ ಮಹಾ
ಭಾಗನೆ ಮದ್ಭೂಮಿಗೆಂತು ಬಂದಯ್ನೀನ
ಭಾಗ್ಯತನಾಗಲ್ವೇಳ್ಕೀಂ
ದಾಗಳ್ ನೃಪಸುತನನಂಳ್ಕರಿಂ ಸತಿ ನುಡಿದಳ್

ಅಂತು ನುಡಿದನಿತಱಿಕೊಳೆ ಕೃತಾರ್ಥನಾದೆನೆಂದು ಬಗೆಯುತ್ತುಂ ದೇವಿಯರ್ಬೆಸಸಿದಂತೆ ಗೆಯ್ವೆನೆಂದಾ ಕಾಂತೆಯ ಬೆಂಬಟಿವಿಡಿದು ನಡೆವ ಶಿಷ್ಯನಂತೆ ಪೋಗೆವೋಗೆ ಕಿಱಿದಂತರದೊಳ್

ಪಿರಿದೆನಿಸಿರ್ದ ನಿಮ್ಮಯ ಪ್ರಸಾದಮನಾಂ ಪಡೆದೊಂದು ಗರ್ವದಿಂ
ಪರಿಚಿತನಂತೆ ಬಿನ್ನವಿಸಲುಂ ಬಗೆದಂದಪೆನಂತುಟಲ್ತೆ ಬಿ
ತ್ತರಿಪೊಡಧೀರಪ್ಪ ಮನುಜಪ್ರಭುಗಳ್ದಯೆಯಿಂದೆ ತಮ್ಮನಾ
ದರಿಸಿದೊಡಾಗಳಂತೆ ಗಟಿಪಲ್ಬಗೆದರ್ಪುದಿದಾವ ವಿಸ್ಮಯಂ

ಆದೊಡಂ
ಮನುಜಂಗೆ ಕೌತುಕಾವಹ
ಮಿನಿತೊಂದಾಶ್ಚರ್ಯಮದಱಿನಿನ್ನೆಸಗೊಳ್
ಲ್ಕನುಗೆಯ್ಯುತಿರ್ದಪುದೀ
ಮನಮನನುಗ್ರಹಿಸಿ ದೇವಿ ಪೇಟಿಲ್ವೇಱ್ಕುಂ

ಸುರಮುನಿಸಿದ್ಧಖೇಚರರೊಳಾವ ಕುಲಂ ನಿಜಜನ್ಮದಿಂದಲಂ
ಕರಿಸಿತೊ ಪಂಚಭೂತಮಯಮಾಗಿಯುಮೀ ತನುವಿಂದು ಕಾಂತಿಯಂ
ತಿರೆ ಪೊಳೆಯುತ್ತು ಮಿರ್ದಪುದಿದೇಂ ಪೊಸಜವ್ವನದೇಟ್ಗೆಯೊಳ್ತಪ
ಶ್ಚರಣಮಿದೇಂ ಪೊದಳ್ದಿಡಿದ ಕಾನನದೊಳ್ಬಿಡದೊರ್ಬಳಿರ್ಪುದೇಂ

ಎಂದುಬೆಸಗೊಳ್ವುದುಂಕಿಱಿದುಬೇಗಂತನ್ನೊಳ್ತಾನೇಭಾವಿಸಿ
ಪೊಳೆವಲರ್ಗಣ್ಗಳಿಂ ಮಿಳಿರ್ವ ಬೆಳ್ಪು ರಸಾತ್ಮಕವಾಗಿ ಗಂಡಮಂ
ಡಳತಳದಿಂದಮಂದಿೞಯುತಿರ್ದುದೆನಲ್ಕಯನಾಂಬು ಲೋಚನಂ
ಗಳಿನಿರದುಣ್ಮೆ ಶಬ್ದಮಣಮಿಲ್ಲದೆ ತೊಟ್ಟನೆ ಕಣ್ಮಗುಟ್ದಳ
ಗ್ಗಳಿಪಱಲಿಂದೆ ಮಾನಿನಿ ಮನಕ್ಕತಿವಿಸ್ಮಯಮಾಗೆ ಭೂಪನಾ

ಅಂತಾ ಕಾಂತೆ ಶೋಕ ಕ್ರಾಂತೆಯಾಗಿ
ರಸೆಯಂ ತಾಂ ತಾಂಕಿ ಕಲ್ಪಾಂತದ ಬಱಸಿಡಿಲೆಯ್ತಂದು ಪೊಯ್ಯಲ್ ನೆಲಂ ಕಂ
ಪಿಸುವಂತತ್ಯಂತಶೋಕಾಕುಲತೆಯಿನೞುತಿರ್ದಪ್ಪ ಘೋರಂದದಿಂ ಮ
ೞ್ಗೆಸಲಿನ್ನಾರಾರ್ಪರೀ ಶೋಕಮನೆನುತೆ ಭಯಂಗೊಂಡಿದೆತ್ತೆತ್ತಲೀಗಳ್
ಬೆಸೆಗೊಂಡೆಂ ಕೆಮ್ಮನೆಂದುಮ್ಮಳಿಸಿ ಪಿರಿದುಮಂದಾ ನೃಪಂವ್ಯಗ್ರನಾದಂ

ಅಂತು ನೃಪನತಿವ್ಯಗ್ರನಾಗಿ ಮುಖಪ್ರಕ್ಷಾಳನಾರ್ಥಂ ಪೇರಡವಿಯೊಳಂ ಜುಳಿಯಿಂದ
ಜಲಮಂತಂದು ದೇವಿಯರವಧಾರಿಸುವುದೆಂದು ಭೂಪನಿಳಿಂಪನುಪರೋಧಿಸುತ್ತು
ಮೆಱೆಯೆ
ಅಳವಿಲ್ಲದೞುತ್ತಿರೆ ಕೆಂ
ಪೆಳಸಿದ ಬಾಷ್ಪಾಂಬುಪೂರ್ಣಲೋಚನಮಂ ತ
ಜ್ಜಳದಿಂದೆ ಕರ್ಚಿ ವಲ್ಕಾಂ
ಚಲದಿಂ ನಿಜವದನಬಿಂಬಮಂ ಸತಿ ತೊಡೆದಳ್

ಅಂತಾ ಕಾಂತೆ ಶೋಕಾಕ್ರಾಂತೆಯಾಗಿರ್ಪುದಂ ಕಂಡಿಂತಪ್ಪವರುಮೞುವಂದಮದ್ಭುತಮೆಂದು
ಮನದೊಳ್ಭಾವಿಸುತ್ತುಮಿರೆ
ಉರಗಮುಖೋಗ್ರದಂಷ್ಟ್ರ ಸಹಜಾತೆಯನೂರ್ಜಿತಕಾಲಪಾಶ ನಿ
ಷ್ಠುರತರರೂಪೆಯಂ ಸಹಜಶಾಕಿನಿಯಂ ವಿಷಕನ್ಯಕಾ ಸಹೋ
ದರಿಯನಪಾರಘೋರ ದುರಿತಾರ್ಣವ ಜಾತೆಯನಾತ್ಮವಲ್ಲಭಾಂ
ತರಿತೆಯನೆನ್ನನಣ್ಣ ಬೆಸಗೊಳ್ವುದೆ ಪೇೞ್ವೆನೆ ತತ್ಪ್ರಪಂಚಮಂ

* * *

## 4. ಅಬ್ಧಿಯುಮೊರ್ಮೆ ಕಾಲವಶದಿಂ ಮರ್ಯ್ಯಾದೆಯಂ ದಾಂಟದೇ
**– ನಾಗಚಂದ್ರ**

ಆ ಸಮಯದೊಳ್ದಶಾಸ್ಯನೊಂದು ತಣ್ಣುಟಿಲ ತಾಣದೊಳ್ ಬೞಿಸಿಡಿಲ ಬೞಿವಿಡಿದು ಪೊಳೆವ
ಕುಡು ಮಿಂಚಿನಂತೆ ಬಲಭದ್ರನ ಕೆಲದೊಳಿರ್ದ ಸೀತೆಯಂ ಕಂಡು
ಬಲೆದೃಷ್ಟಿಗೆ ವಜ್ರದಸಂ
ಕಲೆ ಹೃದಯಕ್ಕೆನಿಪ ರೂಪವತಿ ಜಾನಕಿ ಕ
ಣ್ಬೊಲದೊಳಿರೆ ಪದ್ಮಪತ್ರದ
ಜಲ ಬಿಂದುವಿನಂತೆ ಚಲಿತಮಾದುದು ಚಿತ್ತಂ

ತಳತಳಿಸಿ ಪೊಳೆಯೆ ಸೀತೆಯ
ಚಳ ನಯನಂ ಖಚರ ಚಕ್ರವರ್ತಿಯ ಚಿತ್ತಂ
ಕೊಳದೊಳಗೆವಾಳೆ ತೞಿಂ
ಬೊಳೆವಂತೆ ಕಲಂಕಿ ಕದಡಿದತ್ತಾಕ್ಷಣದೊಳ್

ಹಾರ ಮರೀಚಿ ಮಂಜರಿ ಸುಧಾರಸಧಾರೆ ಸುಧಾಂಶುಲೇಖೆ ಕ
ರ್ಪೂರ ಶಲಾಕೆ ನೇತ್ರ ಸುಖದಾಯಕಮೀದೊರೆತಲ್ಲಮೀಕೆ ಶೃಂ
ಗಾರ ಸಮುದ್ರಮಂ ಕಡೆಯೆ ಹೃದ್ಭವನುದ್ಭವೆಯಾದಳೆಂದು ಕ
ಣ್ಣಾರೆ ದಶಾಸ್ಯನೀಕ್ಷಿಸಿದನೀಕ್ಷಿಸಿ ಕಣ್ಣಡಿದಾರೆ ಮನ್ಮಥಂ

ಪಲರುಂ ವಿದ್ಯಾಧರ ಸ್ತ್ರೀಯರುಮಮರಿಯರುಂ ಮಾನವಸ್ತ್ರೀಯರುಂ ತ
ಮೊಲವಿಂ ಮೇಲ್ವಾಯ್ದೊಡಂ ಮುನ್‌ಬಗೆಯದ ಬಗೆ ಯೇನಾದುದೆಂದುದ್ದತಂ
ಮೂದಲಿಸುತ್ತುಂ ರೂಪಿನೊಳ್ಮಚ್ಚರಿಸುವನೆನಗೆಂದಂಬನಂಬಟ್ಟುವನ್ನಂ
ಪಲಕಾಲಕ್ಕೇಸುವೆತ್ತಂ ದಶಮುಖನೆನುತುಂ ಮನ್ಮಥಂ ಮಾಣದೆಚ್ಚಂ

ನಡೆನಡುಕೋಲ್‌ವರಂ ದಶಮುಖಂ ಮನಮಂ ಸುಮನಶ್ಶಿಲೀಮುಖಂ
ನಡೆಗಿಡೆಕೀರ್ತಿ ಬಾರ್ತೆಗಿಡೆ ಲಕ್ಷ್ಮಿ ಮೊದಲ್ಗಿಡೆ ಮಾನಸಿಕ್ಕನೇ
ರ್ಪಡುಗಿಡೆ ಸತ್ಯಶೌಚಗುಣಸಂಪದಮೇಳಿದನಾದನೆನ್ನರುಂ
ಕಿಡಿಮಸಿಯಾದವೊಲ್ವಿಷಯಲೋಭದಿನೇಳಿದರಾಗದಿರ್ಪರೇ

ವಿಹಿತಾಚಾರಮನನ್ವಯಾಗತ ಗುಣ ಪ್ರಖ್ಯಾತಿಯಂ ದುಷ್ಟ ನಿ
ಗ್ರಹ ಶಿಷ್ಟ ಪ್ರತಿಪಾಲನ ಕ್ಷಮತೆಯಂ ಕಯ್ಯಾಗಿಯದನ್ಯಾಂಗನಾ

ಸ್ಪೃಹೆಯಂ ತಾಳ್ದಿದನಲ್ತೆ ಕಾಲವಶದಿಂ ಲಂಕೇಶ್ವರಂ ವಿಸ್ಮಯಾ
ವಹಮಲ್ತಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ

ಪರ ವಧುಗಾಸೆಗೆಯದವಧಿಕಪಾತಕವೊಂದು ರಘುಪ್ರವೀರನೊಳ್
ಧುರದೊಳಿದಿರ್ಚದೋಸರಿಸಿ ವಂಚಿಸಿ ಸೀತೆಯನುಯ್ವ ಭೀತಿಯೊಂ
ದೆರಡಱೊಳಂ ಜಸಂ ಮಸುಳೆ ತನ್ನವಲೋಕಿನಿಯಂ ದಶಾನನಂ
ಸ್ಮರಿಸಿದನಾತ್ಮಸತ್ವ ಗುಣಹಾನಿಯೆ ಸೂಚಿಸದೇ ವಿನಾಶಮಂ

ಅಂತು ನೆನೆಯಲೊಡಮವಲೋಕಿನೀ ವಿದ್ಯೆ ಬಂದು ಬೆಸನಾವುದೆನೆ ದಶಮುಖ ನಿವರಾರೆಂಬುದುಮ ಯೋದ್ಯಾ ಸಿಂಹಾಸನಕ್ಕಧಿಪತಿಯುಮಿಕ್ಷ್ವಾಕು ವಂಶ ಸಂಭವನುಮಪ್ಪ ನರಣ್ಯ ತನೂಭವಂ ದಶರಥ ನರನಾಥಂ ತದಪತ್ಯರಿವ**ರ್ಈ**ಕಾಲದ ಬಲದೇವ ವಾಸುದೇವ ರ್ದೇವತಾಧಿಷ್ಠಿತಂಗಳಪ್ಪ ವಜ್ರಾವರ್ತ ಸಾಗರಾವರ್ತ ಚಾಪರತ್ನಂಗಳನಪ್ರಯತ್ನದಿಂ ಪಡೆದ ರಾಮಲಕ್ಷ್ಮಣರೆಂಬರ್ ಮಹಾಬಲ ಪರಾಕ್ರಮರೀಕೆ ರಾಮನ ಮಹಾದೇವಿ ಮಿಥಿಲಾಪುರ ವರೇಶ್ವರನಪ್ಪ ಹರಿವಂಶದ ಜನಕನ ತನೂಭವೆ ರಥನೂಪುರ ಚಕ್ರವಾಳಪುರಮನಾಳ್ವ ಚಂಡಬಲನಪ್ಪ ಪ್ರಭಾಮಂಡಲನ ತಂಗೆ ಸೀತಾದೇವಿಯೆಂಬುದು ಮೀಕೆಯನೀತನಿಂದ ಗಲ್ಚುವುಪಾಯಮಾವುದನೆ ದೇವತೆ ಚಕಿತ ಚಿತ್ತೆಯಾಗಿ

ಆರಯ್ಯೆ ವಿರೋಧಂ ಸಾ
ಧಾರಣ ಪುರುಷರೊಳಮುಚಿತಮಲ್ತಧಿಕ ಬಲರ್
ಕಾರಣ ಪುರುಷರಿವರ್ನಿ
ಷ್ಕಾರಣಮಿವರೊಳ್ವಿರೋಧಮಂ ಮಾಡುವುದೇ

ಕಾವ ಬೆಸಂ ನಿನ್ನದು ಸಕ
ಲಾವನಿಯನಧರ್ಮ ನಿರತರಂ ನೀ
ನೀ ವಿಷಯಕ್ಕೆಳಸುವುದುಂ
ಕಾವರೆ ಕಣೆಗೊಂಡರೆಂಬ ನುಡಿಗೆಡೆಯಕ್ಕುಂ

ಅನ್ನೆಯದಿಂನಡೆವವರಂ
ನೀನ್ನಿಯಮಿಸುವೈದಶಾಸ ಪೆಱನಾವಂನಿ
ನ್ನನ್ನಿಯಮಿಸುವಂಮುನ್ನೀರ್
ಬೆನ್ನೀರೆನೆಬೆರಸಲಣ್ಣತಣ್ಣೀರೊಳವೇ

ಎಂದು ತೆಱೆಯೆನುಡಿದುದರ್ಕೆ ಕಡುಮುಳಿದು

ಮದನ ಯಶಃಪಟಹ ಧ್ವನಿ
ಪುದಿಯೆ ವಿಯಚ್ಚರನ ಕರ್ಣಮಂ ಹೃದಯಕ್ಕೆ
ಯ್ದುದುದಿಲ್ಲ ದಿವ್ಯ ವಚನಂ
ಬಿದಿಯಂ ಮೀಱುಗುಮೆ ಪೆಱರ ಪೇೞ್ದುಪದೇಶಂ

ಆನೊಂದಂ ಬೆಸಗೊಂಡೊಡೆ
ನೀನೊಂದನಿದೇಕೆ ಪೇಳ್ವೆಪೇೞ್ದುದನೇಗೊಳ್
ಏನೆಂದು ಕೀಱೆ ನುಡಿವಯ್
ಮಾನವರಾಂತಪರೆ ಮರುಳೆ ಲಂಕಾಪತಿಯಂ

ಎಂಬುದುಂ ವಿದ್ಯಾದೇವತೆ ಕನಲ್ದು
ಜನಕಜೆಯನುಯ್ಯೆ ದಶರಥ
ತನೂಜರಿಂ ಮರಣಮಾಗಲೆಂದಿರ್ದಪು ದೀ
ತನಕಯ್ಯಳವಲ್ತುಪುರಾ
ತನಕರ್ಮಾಯತ್ತಮಲ್ತೆದೇಹಿಗಳೆಸಕಂ

ಗೆಲಲೆನಗೆ ರಿಪು ಬಲಂಬ
ಲ್ವಲಮಾದೊಡೆ ಸಿಂಹನಾದಮಂ ಮಾಂಟ್ಪೆಂಬೆಂ
ಬಲವಾಗಿ ಬರ್ಪುದೆಂದೀ
ಬಲದೇವಂಗಱುಪಿ ವಾಸುದೇವಂ ಪೋದಂ

ಎಂದು ರಾವಣಂಗೆ ಪೇೞ್ವುದುಮವಂರಣಕ್ಕೋಣಿಗೆ ಪೋಗಿ ಲಕ್ಷ್ಮಣಂ ಕೇಳದಂತು ವೈಕುರ್ವಣ
ಶಕ್ತಿಯಿಂ ಸಿಂಹನಾದಂ ಗೆಯ್ಯನೆ ವಿದ್ಯಾದೇವತೆ ಪೋಗಿ ಅಂತೆಗೆಯ್ದುದುಮಾ ಧ್ವನಿಯಂ ಕೇಳ್ದು
ಧುರದೊಳ್ದುರ್ಜಯನಾರ್ಗಮೆನ್ನನುಜನೆಂಬೀ ನಿಶ್ಚಯಂ ಗೆಟ್ಟು ಸಿಂ
ಹರವಂ ದೋಱೆದನಾಹವಂ ವಿಷಮಮೆಂಬೀವಿಸ್ಮಯಂ ಚಿತ್ತದೊಳ್
ದೊರೆಕೊಂಡತ್ತುರ ಘೋದ್ವಹಂಗಮುಱಿದಂದೆಂತಕ್ಕುಮೋ ಜಾನಕೀ
ಹರಣಂ ಕರ್ಮವಿಪಾಕಮಾರ ಬಗೆಗಂ ವೈಕಲ್ಯಮಂ ತಾರದೇ

ಕಾಪಂಪೇೞ್ದು ಜಟಾಯುವ
ನೋಪಳನಿರವೇೞ್ದುವೈರಿಬಲಮಂತವಿಸಲ್
ಪೋಪಂತಿರೆದಂಡಧರಂ
ಚಾಪಧರಂಬಲನವಂಧ್ಯಕೋಪಂಪೋದಂ

ಅನ್ನೆಗಮಿತ್ತಲ್

ಅಳಿಪಿ ಪರವಧುಗಧೋಗತಿ
ಗಿಟಿವುದನಭಿನಯಿಸುವಂತೆ ಸೀತೆಯ ಸಾರ
ಣ್ಗೆಟಿದಂನಭದಿಂ ಖಚರಂ
ಪಟಿಗಂಪಾಪಕ್ಕಮಂಜದವರೇಗೆಯ್ಯರ್

ದೋಷಿಪಿಡಿವಂತೆ ದಿವ್ಯದ
ಕಾಸಿದ ಕುಟುವಂ ಕಡಂಗಿ ಕಾಳೊರಗನಂ
ಕೂಸು ಪಿಡಿವಂತೆ ಪಿಡಿದಂ
ಸಾಸಿಗನವಿವೇಕಿ ಸೀತೆಯಂ ದಶಕಂಠಂ

ಅಂತು ಪಿಡಿದು ನಿಜ ವಿಮಾನದೊಳಿಟ್ಟುಯ್ದುದನಾಗಳದಂ ಕಂಡು ಜಟಾಯು ಕೋಪಾನಲ ವಿಸ್ಫುಲಿಂಗದಂತಾ ರಕ್ತಂಗಳಾದ ಕಣ್ಗಳಿಂ ನುಂಗುವಂತೆ ನೋಡಿ ಖರನ ಖರಂಗಳಿಂ ನಿಶಿತ ಚಂಚುಗಳಿಂದಿಟಿಯಲ್ಕೆ ಸಾರ್ತರೆ ನಸುನಕ್ಕು ಪೊಯ್ಯೆ ಕರದಿಂ ಗಮನೋತ್ಸುಕನಿಂದ್ರ ವೈರಿ ತನ್ನೆರಡುಮೆಱಂಕೆಗಳ ಮುಱಿದಿಳಾತಳದೊಳ್ಜಟಾಯು ಕೆಡೆದತ್ತು

ಮನಮೆಳದಾಗೆಮನ್ಯುಮಿಗೆ ತಳ್ತೆಮೆಯಿಂ ಕರೆಗಣ್ಮೆಸೂಸಿ ಕ
ಣ್ಬನಿಗಳ ಕಂದಳಂ ಬಿಗಿಯೆ ಗದ್ಯದನಿಸ್ವನಮುಣ್ಮೆ ಹಾರವಂ
ಜನಿಯಿಸೆ ಸೀತೆ ಭೀತೆದೆಸೆಗೆಟ್ಟಿರ್ದೆಗೆಟ್ಟಱಿಪೊಣ್ಮಿದತ್ತುಮಾ
ರ್ದನಿದೆಸೆಯೊಳ್ದಿಗಂಗನೆಯರುಂ ಬಿಡದಂದೊಡನಟ್ಟಿಮಾಟ್ಕೆಯಿಂ

ಭೋಂಕನೆ ಕಂಡು ಸೀತೆ ದಶಕಂಧರನಂ ನೆಲೆವೆರ್ಚೆ ಶೋಕವಾ
ತಂಕಮೊಡರ್ಚೆ ಪುಷ್ಪಕ ವಿಮಾನದ ರತ್ನವಿಚಿತ್ರ ಪುತ್ರಿಕಾ
ಸಂಕುಲಮಟಿತ್ತೊಡಮ್ತಿವುಟ್ತುವುಬೆಮರ್ತೊಡೆ ಕೂಡೆ ಬೆಮರ್ತುವಾಗಳಾ
ಲಂಕೆಯ ಸೂಡನುನ್ನತಿಯ ಕೇಡನವಂಗೆ ನಿವೇದಿಪಂತೆ ವೊಲ್

ಬಲೆಗೊಳಗಾದಸೋಗೆನವಿಲಂತೆಭಯಾಕುಲೆತನ್ನಚಿತ್ತದೊಳ್
ನೆಲಸಿದರಾಮನಂಬಯಸಿನೋಡಲಪೇಕ್ಷಿಸಿಬಾಹ್ಯದರ್ಶನ
ಕ್ಕಲಸಿದಳೆಂಬಿನಂಮುಗಿಯೆಕಣ್ಮಲರ್ಗಳ್ನಸುಮುಚ್ಚಿವೋಗಿತ
ಣ್ಣೆಲರಲೆಪಿಂದೆಮೂರ್ಛೆದಿಳಿದಳ್ಮಗುಳ್ದುಂಪೊಱಪೊಣ್ಮೆಹಾರವಂ

ಕ್ರೂರಾತ್ಮಂವಂಚಕನವಿ
ಚಾರಿದುರಾಚಾರಿಬಗೆಯದುಯ್ದಪನೆನ್ನಂ
ಹಾರಾಮಾಹಾರಾಮಾ
ಬಾರಿಪರಾರೆಂದುಸೀತೆಶೋಕಂಗೆಯ್ದಳ್

ಅಂತು ಶೋಕಂಗೆಯ್ವ ಸೀತೆಯಂ ದಶಾಸನನಂತವೀರ್ಯ ಕೇವಲಿಗಳ ಚರಣೋಪಾಂತದೊಳ್ಕಯ್ಕೊಂಡ ಪರಾಂಗನಾವಿರತಿ ವ್ರತದ ಭಂಗಮಂ ಬಗೆಯದುಯ್ದನ್.

* * *

## ಪರಾಮರ್ಶನ ಕೃತಿಗಳು:


1. ಕನ್ನಡ ಸಾಹಿತ್ಯ ಚರಿತ್ರೆ – ರಂ.ಶ್ರೀ. ಮುಗಳಿ
2. ಕನ್ನಡ ಸಾಹಿತ್ಯ ಚರಿತ್ರೆ – ತ.ಸು.ಶಾಮರಾಯ
3. ಕನ್ನಡ ಸಾಹಿತ್ಯದ ಇತಿಹಾಸ – ಎಂ. ಮರಿಯಪ್ಪ ಭಟ್ಟರು
4. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟಗಳು – ಮೈಸೂರು ವಿಶ್ವವಿದ್ಯಾಲಯ
5. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ – ಬೆಂಗಳೂರು ವಿಶ್ವವಿದ್ಯಾಲಯ
6. ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ – ಕೆ. ವೆಂಕಟರಾಯಪ್ಪ
7. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ – ಸಪ್ನ ಬುಕ್ ಹೌಸ್
8. ಆದಿಪುರಾಣ – ಸಂ. ಎಲ್. ಬಸವರಾಜ್
9. ಗದಾಯುದ್ಧ – ಸಂ. ತೀ.ನಂ. ಶ್ರೀಕಂಠಯ್ಯ
10. ಕರ್ಣಾಟಕ ಕಾದಂಬರಿ – ಸಂ. ಟಿ.ಎಸ್. ವೆಂಕಣ್ಣಯ್ಯ
11. ಪಂಪ ರಾಮಾಯಣ ಸಂಗ್ರಹ – ಸಂ. ಡಿ,ಎಲ್. ನರಸಿಂಹಾಚಾರ್
    ತಿರುವಳ್ಳೂರು ಶ್ರೀನಿವಾಸ ರಾಘವಾಚಾರ್

# ಎರಡನೆಯ ಸೆಮಿಸ್ಟರ್ ಬಿ. ಎ. ಐಚ್ಛಿಕ ಕನ್ನಡ ಪತ್ಯ

# ಕನ್ನಡ ಸಾಹಿತ್ಯ ಚರಿತ್ರೆ – 2

## 1. ಬಸವ ಯುಗ:

1. ಈ ಯುಗದ ವೈಶಿಷ್ಟ್ಯಗಳು
2. ವಚನಕಾರರು:
   ದೇವರ ದಾಸಿಮಯ್ಯ
   ಅಲ್ಲಮ ಪ್ರಭು
   ಬಸವಣ್ಣ
   ಅಕ್ಕಮಹಾದೇವಿ
3. ಹರಿಹರ
4. ರಾಘವಾಂಕ
5. ಜನ್ನ

## 2. ಕುಮಾರವ್ಯಾಸ ಯುಗ:

1. ಈ ಯುಗದ ವೈಶಿಷ್ಟ್ಯಗಳು
2. ಕುಮಾರವ್ಯಾಸ
3. ಚಾಮರಸ
4. ಲಕ್ಷ್ಮೀಶ

## 3. ಹರಿದಾಸ ವಾಙ್ಮಯ:

1. ದಾಸ ಸಾಹಿತ್ಯದ ಸ್ವರೂಪ
2. ನರಹರಿ ತೀರ್ಥ
3. ಶ್ರೀಪಾದರಾಜರು
4. ಪುರಂದರದಾಸರು
5. ಕನಕದಾಸರು

## 4. ಇತರೆ ಪ್ರಮುಖ ಕವಿಗಳು:

1. ರತ್ನಾಕರವರ್ಣಿ
2. ಸರ್ವಜ್ಞ
3. ಸಂಚಿಹೊನ್ನಮ್ಮ
4. ಮುದ್ದಣ್ಣ

# ಪ್ರಾಚೀನ ಕಾವ್ಯ ಭಾಗ – 2

## ಪರಿವಿಡಿ

1. ಚಂದ್ರಮತಿ ವಿಲಾಪ – ರಾಘವಾಂಕ
2. ಉತ್ತರಕುಮಾರ – ಕುಮಾರವ್ಯಾಸ
3. ರಾಮಧಾನ್ಯಚರಿತ್ರೆ – ಕನಕದಾಸರು
4. ಕಿರುವೆರಳ ಸಟೆ – ರತ್ನಾಕರವರ್ಣಿ

## 1. ಚಂದ್ರಮತಿ ವಿಲಾಪ

**– ರಾಘವಾಂಕ**

ಒಡೆಯನಾಜ್ಞೆಯ ಸಲಿಸಿ ಪೊಡವಿಪಂ ನಡೆಯುತ್ತ
ಮೃಡಪದಧ್ಯಾನಾಮೃತವನೀಂಟಿ ತೇಗುತ್ತ
ಪಿಡಿದ ಚಿಂತೆಯನೆಲ್ಲವಂ ತೊಲಗಿಸುತ್ತಲತಿಪರಿಣಾಮಮಂ ಧರಿಸುತ
ಪೊಡವಿಯೊಳಗೆಯ್ದೆ ಸತ್ಯವ ಮೆಱೆದು ತೋಱುತ್ತ
ಸುಡುವ ಹೆಣಗಳ ಕಮಱುಗಳನು ಆರಯ್ಯುತ್ತ
ಬಿಡದೆ ನೆಲದೆಱೆಯಕ್ಕಿ ಕಪ್ಪಡವ ಕೊಂಡರಸ ದಿನವ ಕಳಿಯುತ್ತಿರ್ದನು

ಇಂತು ನೃಪನಿತ್ತ ದಿವಸಂ ಕಳೆಯುತ್ತಿರಲತ್ತ
ಲಂತವರನೊತ್ತಿಟ್ಟ ಮನೆಯನೇವೊಗಳ್ವೆನದು
ತಿಂತಿಣಿಯ ಸೊನೆಗಾಱರ ನಿಳಯ ರಕ್ಕಸಿಯ ಮಾಡ ಹಾವಿನ ಹೇಳಿಗೆ
ಅಂತಕನ ನಗರ ಮೃತ್ಯುವಿನ ಬಲುಬಾಣಸದ
ಹಂತಿ ಮಾರಿಯ ಮೂರಿಯಾಟದೆಡೆಯೆಂಬಾಗ
ಳೆಂತು ಜೀವಿಪರಕಟ ಮನೆಯವರ ದುರ್ಧರದೊಳವನಿಪನ ಸತಿಪುತ್ರರು

ಒಡೆಯನತಿಕೋಪಿ ಹೆಂಡತಿ ಮಹಾ ಮೂರ್ಖೆ ಮಗ
ಕಡುಧೂರ್ತ ಸೊಸೆಯಾದಡಧಿಕನಿಷ್ಠುರೆ ಮನೆಯ
ನಡೆವವರು ದುರ್ಜನರು ನೆರೆಮನೆಯವರು ಮಿಥ್ಯವಾದಿಗಳು ಪಶುಗಳಗಡು
ಅಡಿಗಡಿಗೆ ಕೋಪಿಸುವ ಸಾಯೆ ಸದೆಬಡಿವ ಕಾ
ಳ್ಗೆಡೆವ ಕರಕರಿಪ ಸೆಣಸುವ ತಪ್ಪ ಸಾಧಿಸುವ
ಕೆಡೆಯೊದೆವ ಮಾರಿಗಾಱದೆ ಸತ್ತು ಹುಟ್ಟುತಿಹರವನಿಪನ ಸತಿಪುತ್ರರು

ಎಡೆವಿಡದೆ ಹಲವು ಸೂಳೊಡೆಯನರಮನೆಗೆ ನೀ
ರಡಕಿ ಕೊಟ್ಟನಿತು ಬತ್ತವ ಮಿದಿದು ಒಡಲಿಗೆ
ಯ್ದೆಡೆಯಿಕ್ಕಿದನಿತುಮಂ ಉಂಡು ಇರುಳಂ ಹಗಲುಮೆನ್ನದೋರಂತೆ ಕುದಿವ
ಮಡದಿಯ ಕುಮಾರನುದಯದೊಳೆದ್ದು ಹೋಗಿ ಹೇ
ರಡವಿಯೊಳು ಹುಲುಹುಳ್ಳಿಯಂ ಕೊಂಡು ನಿಚ್ಚ ತ

ನ್ನೊಡನಾಡಿಗಳ್ವೆರಸಿ ಬೈಗೆ ಬಂದಿಂತಂ ಕಾಲವನು ಸವೆಯಿಸುತಿರ್ದನು

ಕಸ ನಡುಮನೆಯೊಳಿರಲು ಬೈವನೊಡೆಯಂ ಕಱೆವ
ಪಶುಗಳಗಡುಂ ಕಟ್ಟಿಹೋದಡೊದೆವುವು ಅವನ
ಸೊಸೆ ಬೆನ್ನನೊಱಸಲೆಂದಪ್ಪಳಿಸುವಳು ಗೃಹಸ್ಥನ ಪುತ್ರ ತನ್ನ ಕಾಲ
ಸಸಿನದಲಿ ತೊಳೆಯಳಿವಳೆಂದೊದೆವ ನೆರೆಮನೆಯ
ಪಿಸುಣರಾದವರಿವಳು ಕಳ್ಳೆಯೆಂದೆಯ್ದೆ ಘೂ
ರ್ಮಿಸುತೊಡತಿ ಸದೆವಳೆನೆ ಪುತ್ರಶೋಕವು ಕೂಡಿ ಸಂಧಿಸಿತ್ತೇವೊಗಳ್ವೆನು

ಓರಂತೆ ತಲ್ಲಣಿಸಿ ಹೆದಱೆ ಕಣ್ಗೆಟ್ಟೋಡ
ಬಾರದಿರಬಾರದುಱೆ ಸಾಯಬಾರದು ಬದುಕ
ಬಾರದೆಂಬಂತೆ ತನ್ನೊಡಲಿಂಗೆ ಬಪ್ಪ ದುಃಖಂಗಳಿಗೆ ಸಾಕ್ಷಿಯಾಗಿ
ಧಾರಿಣಿಯೊಳವನಿಪನ ಸತ್ಯ ಸಲಬೇಹುದೆಂ
ಬಾರಯ್ಕೆ ವಿಡಿದು ನಡೆಯುತ್ತಿಪ್ಪ ನಾರಿಯ ಕು
ಮಾರಂಗೆ ಬಂದ ಸಂಕಟದ ಸಂವರಣೆಯನದಾವ ಜೀವರು ಕೇಳ್ವರು

ಎಂದಿನಂತುದಯಕಾಲದೊಳೆದ್ದು ಹುಲುಹುಳ್ಳಿ
ಗೆಂದರಣ್ಯಕ್ಕೆ ನಡೆದಲ್ಲಲ್ಲಿ ಹೋಗಿ ಹಲ
ವಂದದಡುಗಬ್ಬನಾಯ್ದೊಟ್ಟಿ ಹೊಱೆಗಟ್ಟಿ ಹೊತ್ತೋರಗೆಯ ಮಕ್ಕಳೊಡನೆ
ನಿಂದು ಮಧ್ಯಾಹ್ನದುರಿಬಿಸಿಲೆಳೆದೆ ಬಿರಿಯೆ ಜವ
ಗುಂದಿ ತಲೆಕುಸಿದು ನಡೆಗೆಟ್ಟು ಬಾಯಾಱೆ ಹಣೆ
ಯಿಂದ ಬೆವರುಗೆ ನೆತ್ತಿ ಹೊತ್ತಿ ತೇಂಕುತ್ತ ಹರಿತಪ್ಪಾಗಳೇವೊಗಳ್ವೆನು

ಕೆಲದ ವೆಂಳೆಯೊತ್ತಿನೊಳಗಿರ್ದ ಹುತ್ತಿನೊಳು ನಳ
ನಳಿಸಿ ಕೋಮಲತೆಯಿಂ ಕೊಬ್ಬಿ ಕೊನೆವಾಯ್ದು ಕಂ
ಗಳವಟ್ಟು ಬೆಳೆದೆಳೆಯ ದರ್ಭೆಯಂ ಕಂಡು ಹಾರಯಿಸಿ ನಾನಿದನೆಲ್ಲವ
ಗಳಗಳನೆ ಕೊಯ್ದು ಕೊಂಡೊಯ್ದಿತ್ತಡೆನ್ನೊಡೆಯ
ಮುಳಿಯದಿಹನಿದು ಹದಿಹನೆಂಬಾಸೆಯಿಂ ಹೊಱೆಯ
ನಿಳುಹಿ ಕುಡುಗೋಲ್ವಿಡಿದು ಸಾರ್ದನಸ್ತಾದ್ರಿಯಂ ಸಾರುತಿಹ ಸೂರ್ಯನಂತೆ

ಹೊದೆಗಡಿದು ಹತ್ತಿ ಹುತ್ತವ ಸುತ್ತಿದೆಳಹುಲ್ಲ

ಹೊದಱ್ ಹಿಡಿದಡಸಿ ಬಿಡದರಿದು ಸೆಳೆಯಲ್ ಕಯ್ಯ
ಹದರನೊಡೆಗಚ್ಚಿ ಜಡಿಯುತ್ತ ಭೋಂಕನೆ ಬಂದ ರೌದ್ರಸರ್ಪನನು ಕಂಡು
ಹೆದಱಿ ಹವ್ವನೆ ಹಾಱಿ ಹಾ ಎಂದು ಕೈಕಾಲ
ಕೆದಱಿ ಕೊರಳಡಿಯಾಗಿ ಕೆಡೆದನಕಟಕಟ ಮದ
ಮುದಿತ ರಾಹುಗ್ರಸ್ತವಾದ ತರುಣೇಂದುಬಿಂಬಂ ನೆಲಕೆ ಬೀಳ್ವಂದದೆ

ಹುತ್ತಿನಿಂ ಫಣಿವೆರಸಿ ಕೆಡೆಯೆ ಕಂಡೊಡನಿರ್ದ
ತತ್ತು ಕಂದಗಳು ಹೆದರಿ ಬಿಟ್ಟೋಡಿ ಹೋದರೂ
ರತ್ತಲಿತ್ತಂ ತಾಯ್ಗೆ ಹಲುಬಿ ತಂದೆಯ ಕರೆದು ದೆಸೆದೆಸೆಗೆ ಬಾಯ ಬಿಟ್ಟು
ನೆತ್ತಿಗೇಱಿದ ವಿಷದ ಕೈಯಿಂದ ಮಡಿದನೀ
ಹೊತ್ತೆನ್ನ ಕುಲದಕುಡಿ ಮುರಿಟಿತೆಂದುಮ್ಮಳಂ
ಬೆತ್ತು ಬೀಳದೆ ಮಾಣನೆಂಬಂತೆ ರವಿ ಬಿದ್ದನಂದು ಪಡುವಣ ಕಡಲೊಳು

ತನಯನೆಂದುಂ ಬಪ್ಪ ಹೊತ್ತಿಂಗೆ ಬಾರದಿರೆ
ಮನನೊಂದಿದೇಕೆ ತಳುವಿದನೆನ್ನ ಕಂದನೆಂ
ದೆನುತ ಸುಯುತ್ತ ಮಱುಗುತ್ತ ಬಸುಱಂ ಹೊಸೆದು ಕೊನೆವೆರಳ ಮುರಿದುಕೊಳುತ
ತನುವ ಮಱೆದಡಿಗಡಿಗೆ ಹೊಱಗನಾಲಿಸಿ ಮತ್ತೆ
ಮನೆಯೊಡತಿಗಂಜೆ ಕೆಲಸವನು ಮಾಡುತ್ತಿಪ್ಪ
ವನಿತೆಗಾದಾಪತ್ತನಾಲಿಸದೆ ಕೆಟ್ಟು ದಟ್ಟಿಸುವರದನೇನೆಂಬೆನು

ಬಂದಿರನಲೇ ಎಂದು ಪೊಱಮಟ್ಟಡೋಡಿದಪ
ಳೆಂದೆಬರೊಯ್ಯನಳುತಿರಲಮಂಗಳಗಱೆದ
ಳೆಂದೆಂಬರೊಳಗೊಳಗೆ ಮಗನ ಗುಣಮಂ ಹಲುಬುತಿರಲು ಬೈದಪಳೆಂಬರ!
ನಿಂದು ಬೆಱಗಾಗಿ ಮಱೆದಿರೆ ಕೆಲಸಗಳ್ಳಿಯಿವ
ಳೆಂದೆಂಬರೆಮ್ಮೊಮ್ಮೆ ಬಿಸುಸುಯ್ಯೆ ಬೇಸತ್ತ
ಳೆಂದೆಬರಂದು ಬೈವರು ಬೈದು ಬಡಿವರಾ ಮನೆಯವರು ಮಾನಿನಿಯನು

ಉರಿವ ಬಿಸಿಲೊಳು ಹಸಿದು ಬಳಲಿ ಬಸವಳಿದು ಕೆಡ
ದಿರುತಿಪ್ಪನೋ ಎಂದು ಕೀಳಿಲೊಳು ಮಿಗೆ ಕಟ್ಟು
ತಿರೆ ಹಸುಗಳಿಱಿದು ಕೆಡೆದಿರುತಿಪ್ಪನೋ ಎಂದು ನೋಡುತ್ತ ಹಲುಹುಳ್ಳಿಯು
ದೊರಕದಿರೆ ಮನೆಗೆ ಬರಲಂಜಿ ಹೊಱಹೊಱಗಾಡು

ತಿರುತಿಪ್ಪನೋ ಎಂದು ಬೀದಿಯೊಳು ನೋಡಿ ತಡ
ವರಸಿ ಕಾಣದೆ ಮಱುಗುತಳಲಿಂದು ಮನದೊಳಗೊಳಗೆ ಸತ್ತು ಹುಟ್ಟುತ್ತಿರ್ಪಳು

ಅಡವಿಯೊಳು ಹೊಲಬುಗೆಟ್ಟನೊ ಗಿಡುವಿನೊಳಗೆ ಹುಲಿ
ಹಿಡಿದುದೋ ಕಳ್ಳರೊಯ್ದರೊ ಭೂತಸಂಕುಲಂ
ಹೊಡೆದುವೋ ನೀರೊಳದ್ದನೊ ಮರದ ಕೊಂಬೇರಿ ಬಿದ್ದನೋ ಫಣಿತಿಂದುದೋ
ಕಡುಹಸಿದು ನಡೆಗೆಟ್ಟು ನಿಂದನೋ ಎಂದಿಂತು
ಮಡದಿ ಹಲವಂ ಹಲುಬುತಂಗಣದೊಳಿರೆ ಹೊತ್ತಿ
ಹೊಡಕರಿಸಿದಳಲ ಕರ್ಬೊಗೆಯಂತೆ ಕವಿವ ಕತ್ತಲೆಯೊಳಗೆ ನಿಂದಿರ್ದಳು

ಉಟ್ಟಱುವೆಯಂ ಉರದ ಮೇಲಕ್ಕೆ ತೆಗೆಯುತ್ತ
ಬಿಟ್ಟ ಹಂಕಣಿದಲೆಯನಡಿಗಡಿಗೆ ತುಱಿಸುತ್ತ
ನಟ್ಟ ದಿಟ್ಟಿಯೊಳು ತನಯನ ಬರವ ನೋಡುತ್ತ ಕದಪಿದಳು ಕೈಯನಿಟ್ಟು
ಕೆಟ್ಟೆ ನಿನ್ನೇಗುವೆನು ಏನಮಾಡುವ ಮಗನ
ಬಟ್ಟೆಯಂ ನೋಡಿ ಬೆಱಗಾಗುವಿನಿತಕ್ಕೊಡತಿ
ಧಟ್ಟಿಸುವಳೆಂದು ಸಿಡಿಮಿಡಿಗೊಂಡು ಮಱುಗುತ್ತ ನಿಂದು ಸುಱ್ರನೆ ಸುಯ್ದಳು

ಬಂದರಂ ಲೋಹಿತಾಶ್ವಾ ಎಂದು ಬಟ್ಟೆಯೊಳು
ನಿಂದರಂ ಲೋಹಿತಾಶ್ವಾ ಎಂದು ಗಾಳಿ ಗಿಱಿ
ಕೆಂದಡಂ ಲೋಹಿತಾಶ್ವಾ ಎಂದು ಕರೆಕರೆದು ಬಿಡೆ ಬೀದಿಗುರುವಿನಂತೆ
ಮಂದಮತಿಯಾಗಿರ್ದ ಚಂದ್ರಮತಿಗೊಬ್ಬನೈ
ತಂದಿಂದು ಕೂಡೆ ಹೋಗಿರ್ದು ಕಂಡೆ ನಿನ್ನ
ಕಂದನೊಂದುಗ್ರ ಫಣಿತಿಂದು ಜೀವಂಗಳೆದನೆಂದು ಹೇಳಿದನಾಗಳು

ಏಕೆ ಕಚ್ಚಿತ್ತಾವ ಕಡೆ ಯಾವ ಹೊಲನ ಕ್ಕ
ಟಾ ಕುಮಾರಂ ಮಡಿದ ಠಾವೆನಿತು ದೂರವೆನ
ಲೀ ಕಡೆಯೊಳೀ ಹೊಲದೊಳೀ ಮರದ ಕೆಲದ ಹುತ್ತಿನ ಹುಲ್ಲು ಕೊಯ್ಯೆ ಕೈಯ್ಯ
ನೂಕಿ ಫಣಿಯಗಿಯೆ ಕೆಡೆದಂ ದೂರವಲ್ಲಲ್ಲ
ಬೇಕಾದಡೀಗ ಹೋಗಲ್ಲದಿರ್ದಡೆ ಬಳಿಕ
ನೇಕ ಭಲ್ಲುಕ ಜಂಬುಕಂ ಘೂಕ ವೃಕಗಳೆಳೆಯದೆ ಬಿಡವು ಕೇಳೆಂದನು

ನುಡಿಯಲರಿದೆನಿಸಿ ಮೇರೆಯ ಮಿಱುವಳಲನಳ
ವಡಿಸಿ ಬಂದೊಡೆಯನಡಿಗಳ ಮೇಲೆ ಕೆಡೆದು ಬಾ
ಯ್ವಿಡುತ ರಣ್ಯದೊಳೆನ್ನ ಮಗನುಗ್ರ ಕಾಳೋರಗಂ ಕಚ್ಚಿ ಮಡಿದನೆಂದು
ನುಡಿಯೆ ಲೇಸಾಯ್ತು ಮಡಿದಡೆ ಮಡಿದನೆಂದು ಕೆಡೆ
ನುಡಿಯೆ ಬಂಟರನು ಕೊಟ್ಟಱಸಿಸೈ ತಂದೆ ಎನೆ
ನಡುವಿರುಳು ಬಂಟರುಂಟೇ ನಿದ್ದೆಗೆಯ್ಯಬೇಕೇಳು ಕಾಡದಿರೆಂದನು

ನರಿಗಳೆಳೆಯದ ಮುನ್ನದಹಿಸಬೇಡವೆ ತಂದೆ
ಕರುಣಿಸೆನೆ ದುರ್ಮರಣವಟ್ಟ ಶೂದ್ರನನು ಸಂ
ಸ್ಮರಿಸುವವರಾವಲ್ಲವೆಂದೆನೆನಲ್ಕಾನಾದಡಂ ಹೋಗಿ ಕಂಡು ಮಗನ
ಉರಿಗಿತ್ತು ಬಪ್ಪನೇ ಎನೆ ಕೆಲಸಮಂ ಬಿಟ್ಟು
ಹರಿಯದಿರ್ದುದನೆಯ್ದೆಗೆಯ್ದು ಹೋಗೆನಲು ಚ
ಚ್ಚರದಿ ಮಾಡುವ ಕಜ್ಜವೆಲ್ಲವಂ ಮಾಡಿ ಹೊಱವಂಟಳೊಯ್ಯನೆ ಮನೆಯನು

ದಟ್ಟೈಸಿ ಮಡಲಿಱಿದ ಕಾಳದೊಳು ನಡುವಿರುಳು
ನಟ್ಟ ಮುಳ್ಳುಗಳನೆಡಹಿದ ಕಲ್ಲ ಹಾಯ್ದ ಮರ
ಮುಟ್ಟ ನೇಱಿದ ದಡನನಿಳಿದ ಕುಳಿಯಂ ಬಿದ್ದ ದರಿಗಳಂ ಹಿಡಿದ ಗಿಡುವ
ಬಿಟ್ಟ ತಲೆಯಂ ಬಿಚ್ಚಿದುಡುಗೆಯಂ ಮಱೆದು ಗೋ
ಳಿಟ್ಟು ಬಾಯ್ವಿಟ್ಟು ಮೋಱೆಯಿಡುತ ನಡೆತಂದು ಹುಲು
ವಟ್ಟೆಯೊಳು ಬೆಳೆದ ಹೆಮ್ಮರನ ಮಲಗಿಸಿ ನಿಂದ ಹುಳ್ಳಿ ಹೊಱೆಯಂ ಕಂಡಳು

ಈ ಯೆಡೆಯೊಳಿನ್ನಿರದೆ ಮಾಣನೆನುತಂ ಬಂದು
ತಾಯಿ ಮಗನೇ ಮಗನೆ ಮಗನೇ ಹರಿಶ್ಚಂದ್ರ
ರಾಯನ ಕುಮಾರ ಪೇಳಾವ ಠಾವೊಳಕೊಂಡುವಯ್ಯ ನೀನೆಲ್ಲಿರ್ದಪೆ
ಓಯೆಂಬುದೇನು ಕಂದಾ ಬಾಯ ಬಿಡದಿತ್ತ
ಬಾಯೆಂಬುದೇನು ತಂದೇ ಎನ್ನನೊಲ್ಲದಡೆ
ಸಾಯೆಂಬುದೇನುಸುರದಿಱಲೇಕೆ ತರುಣ ಎಂದೋಱಲಿದಳು ಹಂಬಲಿಸುತ

ತೊರೆದ ತವಕದ ಮಱುಕದಿಂದತ್ತಲಿತ್ತ
ಹರಿ ಹರಿದು ಕಂಬನಿಯಕೈಯಿಂದ ಮುಂಗಾಣದಾ

ತುರದೊಳಲ್ಲಲ್ಲಿ ತಡವರಿಸಿ ಕೆಡೆದೆದ್ದು ಕಟ್ಟಳಲುರಿಯ ಸರದೊಳೊಱಲಿ
ಕರೆಯುತ್ತ ಹಳವಿಸುತ ಹಂಬಲಿಸಿ ಬಾಯ್ಬಿಡುತ
ದೊರೆಗೆಡುತ ಮೊಱೆಯಿಡುತಲಳಲುತ್ತ ಬಳಲುತ್ತ
ಹರಹರ ಮಹಾದೇವ ಮಗನ ನುಂಗಿದ ಹುತ್ತಿನೆಡೆಗೆ ಬಂದಳು ಬಂದಳು

ವಿಷದ ಹೊಗೆ ಹೊಯ್ದು ಹಸರಾದ ಮೈ ಮೀಱೆ ನೊರೆ
ಯೊಸರ್ವ ಗಲ್ಲಂ ಕಂದಿದುಗುರ್ಗಳರೆದೆಱೆದಗು
ವಿರ್ಸುವ ಕಣ್ ಹರಿದು ಹುಲುಹಿಡಿದ ಹರಹಿದ ಕೈಗಳುಂಬ ಹೊತ್ತುಣ ಹಡೆಯದೆ
ಹಸಿದು ಬೆಂಗಡರ್ದ ಬಸುಱಕಟಕಟ ಮಡಿದ ಗೋಣ್
ದೆಸೆಗುರುಳಿ ಹುಡಿಹೊಕ್ಕು ಬಱತ ಬಾಯ್ವೆರಸಂದು
ಬಸವಳಿದ ನಿಜಸುತನ ಕಂಡಳು ಹರಿಶ್ಚಂದ್ರನರಸಿ ಹುತ್ತಿನ ಮೊದಲೊಳು

ಕಂಡ ಕಾಣೆಯೊಳು ಶಿವಶಿವ ನಿಂದ ನಿಲವಿನಲಿ
ದಿಂಡುಗೆಡೆದಳು ಮೇಲೆ ಹೊರಳಿದಳು ಬಿಗಿಯಪ್ಪಿ
ಕೊಂಡು ಹೊಟ್ಟೆಯನು ಹೊಸೆಹೊಸೆದು ಮೋಱೆಯ ಮೇಲೆ ಮೊಱೆಯಿಟ್ಟೋವದೊಱಲಿ
ಮುಂಡಾಡಿ ಮುದ್ದುಗೆಯ್ದೋರಂತೆ ಕರೆದು ಕರೆ
ದಂಡಲೆದು ಲಲ್ಲೆಗರೆದತ್ತತ್ತು ಬಲವಳಿದು
ಬೆಂಡಾಗಿಜೀವವಿಕ್ಕೆಂಬಾಸೆಯಿಂ ತೇಂಕುದಾಣಂಗಳಂ ಬಗೆದಳು

ಹಡೆದೊಡಲು ಹುಡಿಯಾಯ್ತು ಮಗನೆ ಮಗನುಂಟೆಂದು
ಕಡಗಿ ಹೆಚ್ಚುವ ಮನಂ ಹೊತ್ತಿ ಹೊಗೆಯಿತ್ತು ಬಿಡ
ದಡರಿ ನಿಟ್ಟಿಸಿ ನಲಿವ ದಿಟ್ಟಿಕೆಟ್ಟುವು ಸೋಂಕಿ ಪುಳಕಿಸುವ ಕರಣಂಗಳು
ಕಡಿವಡೆದುವೊಸೆದು ಹೆಸರ್ಗೊಳುತಿಪ್ಪ ನಾಲಗೆಯ
ಕುಡಿ ಮುರಟಿತೊಮ್ಮೊಮ್ಮೆ ನುಡಿಯನಾಲಿಪ ಕಿವಿಯ
ಹಡಿಗೆತ್ತುದೆಲೆ ಕಂದ ಎಂದೆನುತ್ತಿಂದುಮುಖಿ ಮಱುಗಿ ಬಾಯ್ಬಿಟ್ಟಳಂದು

ಸಿರಿ ಹೋದ ಮಱುಕವನು ನೆಲೆಗೆಟ್ಟಚಿಂತೆಯನು
ಪರದೇಶಮಂ ಹೊಕ್ಕ ನಾಚಿಕೆಯನರಿಯದ
ನ್ಯರ ಮನೆಯತೊತ್ತಾದ ಭಂಗವನು ನಿಮ್ಮಯ್ಯಗಜ್ಞಾತವಾದಳಲನು
ನೆರೆದು ಮನೆಯವರೆಯ್ದೆಕರಕರಿಪ ದುಃಖವನು
ತರಳ ನಿನ್ನಂ ನೋಡಿ ಮಱೆದು ಪರಿಣಾಮಮಂ
ಧರಿಸುತಿಪ್ಪೆನ್ನ ಗೋಣಂಕೊಯ್ದೆ ಇನ್ನಾರ ನೋಡಿ ಮಱೆದಪೆನೆಂದಳು

ಅತಿ ಲಜ್ಜೆಗೆಟ್ಟನ್ಯರಾಳಾಗಿ ದುಡಿದು ಧಾ
ವತಿಗೊಂಡು ಧನವನಾರ್ಜಿಸಿ ಹರಿಶ್ಚಂದ್ರ ಭೂ
ಪತಿ ನಮ್ಮ ಬಿಡಿಸುವಾರ್ತದ ಮೋಹದಿಂ ಹಸಿವು ನಿದ್ದೆಯಂ ತೋಱದು ಬಂದು
ಸುತನ ಕರೆಯೆಂದಡೇನೆಂಬೆನಾವುದ ತೋಱ
ಪತಿಯ ಮಱುಕವನು ಮಱೆಯಿಸುವನುಗ್ರಾಹಿಗಾ
ಹುತಿಯಾದನೆಂದು ಪೇಳ್ವೆನೆ ಎನ್ನಕಂದ ಎಂದಿಂದುಮುಖಿ ಬಾಯ್ಬಿಟ್ಟಳು

ಅರಮನೆಯ ಮಣಿಗೃಹದ ಸೆಜ್ಜೆಯೊಳು ರಿಪುನೃಪರ
ಕರಿದಂತದಿಂಕಡೆದ ಕಾಲ ಮಂಚದೊಳಿಟ್ಟ
ವರಹಂಸತೂಲತಲ್ಪದೊಳು ಮೇಣಿವಳಗಿನೊಳು ಸಾಗಿಸುವ ಜೋಗೈಸುವ
ತರುಣಿಯರ ನಡುವೆ ಪವಡಿಸುವ ಸುಕುಮಾರನೀ
ನರವರಿಸದೀ ಕಾಡೊಳಿರುತ ಕತ್ತಲೆಯೊಳಾ
ಸುರದ ಕಲುನೆಲದೊಳೊಬ್ಬನೆ ಪವಡಿಸುವುದುಚಿತವೇಎಂದು ಬಾಯ್ದಿಟ್ಟಳು

* * *

## 2. ಉತ್ತರಕುಮಾರ

**– ಕುಮಾರವ್ಯಾಸ**

ಕೇಳು ಜನಮೇಜಯ ಸುಯೋಧನ
ನಾಳು ಮುತ್ತಿತು ತುರುಗಳನು ಮೇ
ಲಾಳು ಕವಿದುದು ಭೀಷ್ಮಕರ್ಣದ್ರೋಣ ಮೊದಲಾಗಿ
ಕೋಲ ಸೂಟಿಯ ಸರಿವಳೆಗೆ ಗೋ
ಪಾಲ ಪಡೆ ಮುಗ್ಗಿದುದುಗೋವರ
ಸಾಲ ಹೊಯ್ದರುಕರ್ಣದುಶ್ಯಾಸನಜಯದ್ರಥರು

ಬೆಗಡು ಮುಸುಕಿದ ಮುಖದ ಭೀತಿಯ
ಢಗೆಯ ಹೊಯ್ಲಿನ ಹೃದಯತುದಿ ನಾ
ಲಗೆಯ ತೊದಳಿನ ನುಡಿಯ ಬೆರಗಿನ ಬರತ ತಾಳಿಗೆಯ
ಅಗಿವ ಹುಯ್ಯಲುಗಾರ ಬಹಳೋ
ಲಗಕೆ ಬಂದನು ನೃಪ ವಿರಾಟನ
ಮಗನ ಕಾಲಿಂಗೆರಗಿದನುದೂರಿದನು ಕಳಕಳವ

ಏಳು ಮನ್ನೆಯಗಂಡನಾಗು ನೃ
ಪಾಲ ಕೌರವರಾಯ ತುರುಗಳ
ಕೋಳ ಹಿಡಿದನು ಸೇನೆ ಬಂದುದುಧರಣಿಯಗಲದಲಿ
ದಾಳಿ ಬರುತಿದೆ ಕರೆಸಿಕೋ ನಿ
ನ್ನಾಳು ಕುದುರೆಯರಾಣಿವಾಸದ
ಗೂಳೆಯವ ತೆಗೆಸೆಂದು ನುಡಿದನು ಬಿನ್ನಹದ ಬಿರುಬ

ಎಂದಡುಬ್ಬರಿಸಿದನು ತಾ ಕಲಿ
ಯೆಂದು ಬಗೆದನು ಮೀಸೆಯನು ಬೆರ
ಳಿಂದ ತಿರುಹುತ ಮುಗುಳುನಗೆ ಹರುಷದಲಿ ಮೈಮರೆದಗ
ಸಂದಣಿಸಿ ರೋಮಾಂಚ ಕೆಲಬಲ
ದಿಂದುಮುಖಿಯರ ನೋಡಿದನು ನಲ
ವಿಂದ ನುಡಿದನುತನ್ನ ಪೌರುಷತನದ ಪರಿಣತೆಯ

ಜವನ ಮೀಸೆಯ ಮುರಿದನೋ ಭೈ
ರವನದಾಡೆಯನುಗಿದನೋ ಮೃ
ತ್ಯುವಿನ ಮೇಲುದ ಸೆಳೆದನೋ ಕೇಸರಿಯಕೆಣಕಿದನೊ
ಬವರವನುತೊಡಗಿದನಲಾ ಕೌ
ರವನಕಟ ಮರುಳಾದನೆಂದಾ
ಯುವತಿಯರ ಮೊಗ ನೋಡುತುತ್ತರ ಬಿರುದಕೆದರಿದನು

ಆರೊಡನೆಕಾದುವೆನು ಕೆಲಬರು
ಹಾರುವರುಕೆಲರಂತಕನ ನೆರೆ
ಯೂರವರುಕೆಲರಧಮಕುಲದಲಿ ಸಂದುಬಂದವರು
ವೀರರೆಂಬವರಿವರು ಮೇಲಿ
ನ್ನಾರ ಹೆಸರುಂಟವರೊಳೆಂದು ಕು
ಮಾರ ನೆಣಗೊಬ್ಬಿನಲಿ ನುಡಿದನು ಹೆಂಗಳಿದಿರಿನಲಿ

ನುಡಿದು ಫಲವೇನಿನ್ನು ಸಾರಥಿ
ಮಡಿದ ನಿನ್ನಿನ ಬವರದಲಿ ತಾ
ನುಡುಹನಾದೆನು ಶಿವಶಿವಾಯಿಂದೆನ್ನ ಕೈಮನಕೆ
ಗಡಣಿಸುವ ಸಾರಥಿಯನೊಬ್ಬನ
ಪಡೆದೆನಾದೊಡೆಕೌರವೇಂದ್ರನ
ಪಡೆಗೆ ಹಬ್ಬವ ಮಾಡುವೆನುತೋರುವೆನುಕೈಗುಣವ

ಕೇಳಿದನು ಕಲಿಪಾರ್ಥನೀತನ
ಬಾಲಭಾಷೆಗಳೆಲ್ಲವನು ಪಾಂ
ಚಾಲೆಗೆಕ್ಕಟಿ ನುಡಿದ ನಾವಿನ್ನಿಹುದು ಮತವಲ್ಲ
ಕಾಲ ಸವೆದುದು ನಮ್ಮರಾಜ್ಯದ
ಮೇಲೆ ನಿಲುಕಲುಬೇಕು ಕೌರವ
ರಾಳು ನವಗೋಸುಗವೆ ಬಂದುದು ಕಾಂತೆ ಕೇಳೆಂದ

ನರನ ಸಾರಥಿಯೆಂದು ನೀನು
ತ್ತರೆಗೆ ಸೂಚಿಸಿ ತನ್ನನೀಗಳೆ

ಕರೆಸೆನಲುಕೈಕೊಂಡುದುರುಪದಿ ಬಂದಳೊಲವಿನಲಿ
ತರುಣಿ ಕೇಳರ್ಜುನನ ಸಾರಥಿ
ವರ ಬೃಹನ್ನಳೆ ಖಾಂಡವಾಗ್ನಿಯ
ಹೊರೆದನಿವ ತಾನೆಂದು ಸತಿಯುತ್ತರೆಗೆ ಹೇಳಿದಳು

(ತಂಗಿಯ ಸೂಚನೆಯಂತೆ, ಬೃಹನ್ನಳೆಯ ವೇಷದಲ್ಲಿದ್ದಅರ್ಜುನನನ್ನು ಸಾರಥಿಯನ್ನಾಗಿ ಮಾಡಿಕೊಂಡುಉತ್ತರನುಯುದ್ಧರಂಗಕ್ಕೆ ಬರುತ್ತಾನೆ.)

ಎಲೆ ಪರೀಕ್ಷಿತತನಯ ಕೇಳ್ ನೃಪ
ತಿಲಕನತಿವೇಗದಲಿ ರಥವನು
ಕೊಳುಗುಳಕೆ ತರೆಕಂಡನುತ್ತರ ಮುಂದೆದೂರದಲಿ
ತಳಿತ ಕುಂತದ ಬಾಯಿಧಾರೆಯ
ಹೊಳವುಗಳ ಹೊದರೆದ್ದ ಸಿಂಧದ
ಸೆಳೆಯ ಸೀಗುರಿಗಳ ಸುರಂಭದ ಸಕಲ ಮೋಹರವ

ಕಾಲಕೂಟದತೊರೆಯೊ ಮಾರಿಯ
ಗೂಳೆಯವೊ ಮೃತ್ಯುವಿನ ಗಂಟಲ
ತಾಳಿಗೆಯೊ ಭೈರವನಥಟ್ಟೋಜವನ ಜಂಗುಳಿಯೊ
ಕಾಲರುದ್ರನ ನೊಸಲ ವಗ್ನಿ
ಜ್ವಾಲೆಯೋಕೌರವನ ಸೇನಾ
ಜಾಲವೋ ಶಿವಯೆನುತ ಹೆದರಿದನಂದು ಸುಕುಮಾರ

ಹಸಿದ ಮಾರಿಯ ಮಂದೆಯಲಿ ಕುರಿ
ನುಸುಳಿದಂತಾದೆನು ಬೃಹನ್ನಳೆ
ಯೆಸಗದಿರು ತೇಜಿಗಳ ತಡೆಚಮ್ಮಟಿಗೆಯನು ಬಿಸುಡು
ಮಿಸುಕಬಾರದು ಪ್ರಳಯಕಾಲನ
ಮುಸುಕನುಗಿವವನಾರುಕೌರವ
ನಸಮಬಲನ್ನೈ ರಥವ ಮರಳಿಚಸು ಜಾಳಿಸುವೆನೆಂದ

ಎಲೆ ಕುಮಾರಕ ಮೊದಲ ಚುಂಬನ
ದೊಳಗೆ ಹಲ್ಲು ಬಿದ್ದಂತೆ ಕಾಳಗ

ದೊಳಗೆ ಬೆರೆಯದ ಮುನ್ನ ಹಿಡಿದೈ ಸಮರಭೀತಿಯನು
ಅಳುಕಲಾಗದು ನಿಮ್ಮತಂದೆಯ
ಕುಲಕೆ ಕುಂದನುತಾರದಿರು ಮನ
ಗೆಲವಿನಲಿ ಕಾದೆನುತರಥವನು ಬೇಗ ಹರಿಸಿದನು

ಸಾರಿ ಬರಬರಲವನ ತನು ಮಿಗೆ
ಭಾರಿಸಿತು ಮೈ ಮುರಿದುರೋಮ ವಿ
ಕಾರ ಘನ ಕಾಹೇರಿತವಯವ ನಡುಗಿ ಡೆಂಡಣಿಸಿ
ಭೂರಿ ಭಯತಾಪದಲಿ ತಾಳಿಗೆ
ನೀರುದೆಗೆದುದುತುಟಿಯೊಣಗಿ ಸುಕು
ಮಾರಕಣ್ಣೆವೆ ಸೀಯೆ ಕರದಲಿ ಮುಚ್ಚಿದನು ಮುಖವ

ಏಕೆ ಸಾರಥಿರಥವ ಮುಂದಕೆ
ನೂಕಿ ಗಂಟಲ ಕೊಯ್ವೆ ಸುಡುಸುಡು
ಕಾಕಲಾ ಕಣ್ಣೊಡೆದವೇಕಾಣಾ ಮಹಾಬಲವ
ನಾಕನಿಳಯರಿಗರಿದು ನಿನಗೆ ವಿ
ವೇಕವೆಳ್ಳನಿತಿಲ್ಲ ತೆಗೆತೆಗೆ
ಸಾಕು ವಾಘೆಯ ಮರಳಿ ಹಿಡಿ ತೇಜಿಗಳ ತಿರುಹೆಂದ

ಎಂದೊಡರ್ಜುನ ನಗುತರಥವನು
ಮುಂದೆ ನಾಲ್ಕೆಂಟಡಿಯ ನೂಕಲು
ಕೊಂದನೀ ಸಾರಥಿಯೆನುತ ಸಂವರಿಸಿ ಮುಂಜೆರಗ
ಬಂದು ಮೆಲ್ಲನೆರಥದ
ಹಿಂದಕೆ ನಿಂದುಧುಮ್ಮಿಕ್ಕಿದನು ಬದುಕಿದೆ
ನೆಂದು ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ

ನೋಡಿದನು ಕಲಿಪಾರ್ಥನೀ ಕೇ
ಡಾಡಿಕೆದರಿದಕೇಶದಲಿ ಕೆ
ಟ್ಟೋಡುತಿರಲೆಲೆ ಪಾಪಿ ಹಾಯ್ದನು ಹಿಡಿಯಬೇಕೆನುತ
ಕೂಡೆ ಸೂಟಿಯೊಳಟ್ಟಲಿಳೆಯ
ಲ್ಲಾಡಲಹಿಪತಿ ಹೆದರಲಿತ್ತಲು

ನೋಡಿಕೌರವಸೇನೆಕೆಡೆದುದು ನಗೆಯ ಕಡಲೊಳಗೆ

ಇತ್ತಲರ್ಜುನನುತ್ತರನ ಬೆಂ
ಬತ್ತಿ ಬಂದನು ಹೋದೆಯಾದರೆ
ಕಿತ್ತು ಬಿಸುಡುವೆ ನಿನ್ನತಲೆಯನು ನಿಲ್ಲುನಿಲ್ಲೆನುತ
ಮೃತ್ಯುವೋ ಸಾರಥಿಯೊ ಪಾಪಿಯ
ನೆತ್ತಣಿಂದವೆ ಮಾಡಿಕೊಂಡೆನೆ
ನುತ್ತ ಮರಳಿದು ನೋಡಿ ನಿಲ್ಲದೆ ಮತ್ತೆ ಸೈವರಿದ

(ಅರ್ಜುನನು ಉತ್ತರನನ್ನು ಅಟ್ಟಿಸಿಕೊಂಡು ಹೋಗಿ ಹಿಡಿದುಕೊಳ್ಳುತ್ತಾನೆ)

ಹಲುಗಿರಿದು ಬಾಯೊಳಗೆ ಬೆರಳಿ
ಟ್ಟಳುಕಿ ತಲೆವಾಗಿದನು ಸಾರಥಿ
ಕಳುಹಿ ಕಳೆಯ್ಯೆ ನಿನ್ನ ಬಸುರಲಿ ಮರಳಿ ಬಂದವನು
ಕೊಳುಗುಳದೊಳೀಯೊಡ್ಡ ಮುರಿವ
ಗ್ಗಳೆಯರುಂಟೇ ಲೋಗರಿಂದವೆ
ಕೊಲಿಸದಿರು ನೀ ಕುತ್ತಿಕೆಡಹುಕಠಾರಿಯಿದೆಯೆಂದ

ಎಲವೊ ಸಾರಥಿಯಾಗು ನಡೆ ನೀ
ಗಳಹಿದೊಡೆ ಕಟವಾಯಕೊಯ್ವೆನು
ಕೊಲುವೆನೀ ಪ್ರತಿಭಟನಿಕಾಯವ ನಿನ್ನ ಸಾಕ್ಷಿಯಲಿ
ಬಳಿಕ ನೀ ನಗು ನಡೆಯೆನುತರಿಪು
ಬಲಭಯಂಕರನುತ್ತರನ ಹೆಡ
ತಲೆಯ ಹದರಿನೊಳೌಂಕಿ ತಂದನು ರಥವನೇರಿಸಿದ

(ಅನಂತರ ಅರ್ಜುನನು ಉತ್ತರನನ್ನು ಒಂದು ಬನ್ನಿಯ ಮರದ ಬಳಿಗೆ ಕರೆದುಕೊಂಡು ಹೋಗಿ, ಅಲ್ಲಿ ಪಾಂಡವರು ಬಚ್ಚಿಟ್ಟಿದ್ದ ಆಯುಧಗಳನ್ನೂ ರಥವನ್ನೂ ತೆಗೆದುಕೊಳ್ಳುತ್ತಾನೆ. ಆಗ, ಬೃಹನ್ನಳೆಯ ವೇಷದ ತನ್ನ ಸಾರಥಿ ಅರ್ಜುನನೆಂದು ಉತ್ತರನಿಗೆ ತಿಳಿಯುತ್ತದೆ. ಬಳಿಕ ಇಬ್ಬರೂ ರಣರಂಗಕ್ಕೆ ಬರುತ್ತಾರೆ.)

ತುರಗಗರ್ಜನೆರಥದಚೇತ್ರಿತಿ

ವರಧನುಷ್ಟಂಕಾರಕಪಿಯ
ಬ್ಬರಣೆ ಪಾರ್ಥನ ಬೊಬ್ಬೆ ನಿಷ್ಠುರದೇವದತ್ತರವ
ಅರರೆ ಹೊದರೆದ್ದವುಗಿರಿವ್ರಜ
ಬಿರಿಯೆ ಜಲನಿಧಿ ಜರಿಯೆತಾರಕೆ
ಸುರಿಯೆ ಸುರಕುಲ ಪರಿಯೆ ಭೀತಿಯಲಹಿತಬಲ ಹರಿಯೆ

ಶಿರವ ಸಿಡಿಲೆರಗಿದವೋಲುತ್ತರ
ತಿರುಗಿಬಿದ್ದನು ಮೂರ್ಛೆಯಲ್ಲಿ ಹೊಡೆ
ಮರಳಿದವು ಕಣ್ಣಾಲಿ ಕಾರಿದವರುಣವಾರಿಗಳ
ಹೊರಳುತಿರಲೆಲೆ ಪಾಪಿ ಸೈರಿಸ
ಲರಿಯನಿನ್ನೇನೆನುತ ಫಲುಗುಣ
ಸೆರಗಿನಲಿ ಬೀಸಿದನು ಕುಳ್ಳಿರಿಸಿದನು ರಥದೊಳಗೆ

ಏನು ಮತ್ಸ್ಯಕುಮಾರ ಭವಣೆಯಿ
ದೇನು ನಿನಗೆಂದೆನಲುಜಗದವ
ಸಾನದಂದದಿ ಸಿಡಿಲು ಸುಳಿದುದು ಬಿರಿದುದೆನ್ನೊಡಲು
ಆನಲಾಪನೆ ನಿನ್ನ ಬಹಳ
ಧ್ವಾನವನು ಸಾಕೆನ್ನ ಕಳುಹು ಮ
ಹಾ ನಿಧಾನವ ಮಾಣುಮಾಣೆನೆ ಪಾರ್ಥನಿಂತೆಂದ

ಖೇಡನಾಗದಿರದುಭುತಧ್ವನಿ
ಮಾಡೆನಂಜದಿರಂಜದಿರುಧೃತಿ
ಮಾಡಿಕೊಂಡೀರಥವಜೋಡಿಸೆನುತ್ತ ಸಂತೈಸಿ
ಮೂಡಿಗೆಯಲಂಬುಗಿದುತಿರುವಿಗೆ
ಹೂಡಿದನು ಫಲುಗುಣನಕದನವ
ನೋಡಲಮರಶ್ರೇಣಿ ಮೇಳೈಸಿತ್ತು ಗಗನದಲಿ

(ಅರ್ಜುನನಿಗೂ ಕೌರವಸೇನೆಗೂ ಘೋರಯುದ್ಧ ನಡೆದು, ಅಂತ್ಯದಲ್ಲಿ ಅರ್ಜುನನು ಪ್ರಯೋಗಿಸಿದ ಸಮ್ಮೋಹನಾಸ್ತ್ರದಿಂದ ಪ್ರತಿಪಕ್ಷಸೇನೆಯು ಮೈಮರೆದು ಒರಗುತ್ತದೆ. ಉತ್ತರನೂ ಅರ್ಜುನನೂ ರಥದಿಂದ ಕೆಳಗಿಳಿದು, ಸೋತವರ ಅಮೂಲ್ಯ ವಸ್ತ್ರಾಭರಣಗಳನ್ನು ಸಂಗ್ರಹಿಸಿಕೊಳ್ಳುತ್ತಾರೆ.)

ಧರಣಿಪಾಲರ ಮಕುಟವನು ಕ
ತರಿಸಿ ದುಶ್ಯಾಸನನ ಘನ ಶಿರ
ವರದರತ್ನವನುಡಿದು ಭೂರಿಶ್ರವಜಯದ್ರಥರ
ಹೊರಳಿಚಿದನು ವಿಶೋಕಕುವರರ
ಹುರುಳುಗೆಡಿಸಿದನಖಿಳ ರಾಯರ
ಶಿರಕೆ ಭಂಗವ ಹೊರಿಸಿ ಫಲುಗುಣನಡರಿದನುರಥವ

ಬಳಿಕ ಫಲುಗುಣನತ್ತಲಾ ಮರ
ದೊಳಗೆ ಕೈದುವನಿರಿಸಿ ಮುನ್ನಿನ
ಹುಲುರಥವ ಮೇಳೈಸಿ ಸಾರಥಿತನವನಳವಡಿಸೆ
ಇಳಿದು ಪಾರ್ಥನ ಮೈದಡವಿ ಕಪಿ
ಕುಲಲಲಾಮನು ವನಕೆ ಹಾಯ್ದನು
ಹೊಳಲ ಹೊರೆಯಲಿ ನಿಂದು ನಗುತುತ್ತರನೊಳಿಂತೆಂದ

ಕರೆದುದೂತರಿಗರುಹು ನೀನೇ
ಧುರವ ಜಯಿಸಿದನೆನ್ನು ನಾವಿ
ದ್ದಿರವನರುಹದಿರಿಂದು ಪಸರಿಸು ನಿನ್ನ ವಿಕ್ರಮವ
ಅರಸ ನಿನ್ನನೆ ಮನ್ನಿಸಲಿ ಪುರ
ಪರಿಜನಂಗಳು ನಿನ್ನ ವಿಜಯದ
ಹರುಷದಲಿ ಹೆಚ್ಚಿರಲಿ ನೇಮಿಸಿದಂತೆ ಮಾಡೆಂದ

ಲೀಲೆ ಮಿಗಲುತ್ತರನು ಪುರಜನ
ಜಾಲ ಜೀಯೆನಲಿದಿರು ಬಂದ
ನಿ ವಾಳಿಗಳ ನೂಕಿದನು ಕೈವಾರಿಗಳ ಕೋಪಿಸುತ
ಆಲಿಯವನಿಯ ಬರೆಯೆ ಮುಸುಕಿನ
ಮೇಲು ದುಗುಡದ ಭಾರದಲಿ ರಾ
ಜಾಲಯಕೆ ಬರಲಿದಿರುಬಂದಪ್ಪಿದನು ನಂದನನ

ಮಗನೆ ಕರ್ಣದ್ರೋಣ ಭೀಷ್ಮಾ
ದಿಗಳನೊಬ್ಬನೆ ಗೆಲಿದೆಯಾ ಕಾ

ಳಗದ ಕಡುಗಲಿತನಗಳುಂಟೇ ಪೂರ್ವಪುರುಷರಲಿ
ದುಗುಡವೇಕೆನ್ನಾಣೆ ಹೆತ್ತರ
ಮೊಗಕೆ ಹರುಷವತಂದೆಲಾ ಹಂ
ಗಿಗನೆ ನೀ ತಲೆಗುತ್ತಲೇಕೆಂದೆತ್ತಿದನು ಮುಖವ

ಕಾದಿ ಗೆಲಿದವ ಬೇರೆ ಸಾರಥಿ
ಯಾದತನಗೀಸೇಕೆ ನಿಮ್ಮಡಿ
ಯಾದರಿಸಲೊಡೆಮುರಿಚಬಲ್ಲೆನೆ ನಾಚಿಸದಿರೆನಲು
ಕಾದಿದಾತನು ನೀನು ಸಾರಥಿ
ಯಾದವನುತಂಗಿಯ ಬೃಹನ್ನಳೆ
ವಾದ ಬೇಡೆಲೆ ಮಗನೆ ಬಲ್ಲೆನು ನಿನ್ನ ವಿಕ್ರಮವ

ಅದಟುತನವೆನಗುಂಟೆ ಬೆಂದುದ
ಬೆದಕಿ ನೋಯಿಸಬೇಡ ಹಗಲಿನ
ಕದನವನುಗೆಲಿದಾತ ಬೇರಿಹ ಬೊಪ್ಪ ನುಡಿಯದಿರು
ಉದಯದಲಿ ಗೆಲಿದಾತನನು ನಿ
ಮ್ಮಿದಿರಿನಲಿ ತೋರುವೆನು ಬೀಳ್ಕೊಡಿ
ಸದನಕೆಂದುಕುಮಾರ ಕಳುಹಿಸಿಕೊಂಡನರಮನೆಗೆ

ತಾತ ಬಿನ್ನಹ ನಿನ್ನ ವೈರಿ
ವ್ರಾತವನುಗೆಲಿದಾತನೀತೋ
ಪಾರ್ಥನೀತನ ಮುಂದೆ ಮೆರೆವವಕೀಚಕಾಂತಕನು
ಈತ ನಕುಲನು ವಾಮದಲಿ ನಿಂ
ದಾತ ಸಹದೇವಾಂಕನಿನಿಬರಿ
ಗೀತ ಹಿರಿಯನುಧರ್ಮನಂದನನೆಂದು ತೋರಿಸಿದ

**********

## 3. ರಾಮಧಾನ್ಯಚರಿತ್ರೆ

**– ಕನಕದಾಸರು**

ತಡೆಯದ್ಯೆತಂದುಭಯಬಲ ಸಂ
ಗಡಿಸಿ ಬರುತಿರೆ ಮುಂದೆ ಸೇತುವ
ಮಡದಿಗೆಲ್ಲವ ತೋರಿಸುತ ನೆರೆ ಕಡಲ ದಾಂಟಿಯರು
ನಡೆದು ರಾಮೇಶ್ವರದ ಬಳಿಯಲಿ
ಮೃಡನ ಪೂಜಿಸಿ ಭಕ್ತಿಭಾವದ
ಸಡಗರದಿ ವಾಲ್ಮೀಕಿಯಾಶ್ರಮಕೈದಿದನು ನೃಪತಿ

ಆ ಮಹಾವನದೊಳಗೆ ಸುಭಟ
ಸ್ತೋಮವಿಳಿದುದು ಪಾಳೆಯದ ಸಂ
ಗ್ರಾಮದಿದಿರಲಿ ಗುಡಿಗುಡಾರಂಗಳು ವಿರಾಜಿಸಿತು
ರಾಮಣೀಯಕ ರಚನೆಯಲಿ ಸು
ತ್ರಾಮನೋಲಗದಂತೆ ರಘುಕುಲ
ರಾಮನೈದಿರೆ ಬಂದು ಕಂಡರು ಸಕಲ ಮುನಿವರರು

ಕೌಶಿಕನು ಜಮದಗ್ನಿಜನ್ನು ಪ
ರಾಶರನು ಜಾಬಾಲಿ ಭೃಗು ದೂ
ರ್ವಾಸ ಗೌತಮನಾದಿಯಾದ ಸಮಸ್ತ ಮುನಿವರರು
ಭಾಸುರದ ತೇಜದಲಿ ತಮ್ಮ ನಿ
ವೇಶನವ ಹೊರವಂಟು ಬಂದರು
ದಾಶರಥಿಯನು ಕಂಡು ಹರಸಿದರಕ್ಷತೆಯ ತಳಿದು

ರಾಮ ದಶರಥತನಯ ರಘುಕುಲ
ಸೋಮ ಸನ್ನುತ ಸನಾಮನಾಹವ
ಭೀಮ ಸುಜನ ಪ್ರೇಮ ಜಗದಭಿರಾಮ ನಿಸ್ಸೀಮ
ತಾಮರಸದಳ ನಯನ ದೇವ
ಪ್ರೇಮ ಸುರಕುಲ ಮೌಳಿವಂದಿತ
ಪ್ರೇಮದಿಂದಲಿ ಪಾಲಿಸೆನ್ನು ತಲವರು ಪೊಗಳಿದರು

ದೇವಿ ಜಾನಕಿಸಹಿತ ವನದಲಿ
ನೀವು ಕಷ್ಟವ ಬಳಸಿ ಭಕ್ತರ
ಕಾವ ಹದನನು ನೆನೆದು ವಾನರ ಬಲಸಮೇತದಲಿ
ರಾವಣನ ಸಂಹರಿಸಿ ಲಂಕೆಯ
ನಾವಿಭೀಷಣಗಿತ್ತು ನಮ್ಮನು
ದೇವ ಪಾಲಿಸೆ ಬಂದೆಯದಂದುಪಚರಿಸಿದರು ನೃಪನ

ಸಾರಹೃದಯರು ನೀವು ನಮಗು ಉಪ
ಚಾರವೇಕಿದು ನಿಮ್ಮಡಿಯ ಕರು
ಣಾ ರಸವೆ ಸಲಹುವುದು ನಮ್ಮನು ಸಾಕದಂತಿರಲಿ
ಆರಿಗುಂಟಿದು ನಿಮ್ಮ ದರುಶನ
ಸೇರಿತೆಮಗಿಂದಿನಲಿ ಯೆಂದುಪ
ಚಾರದಿಂ ಸತ್ಕರಿಸಿ ಕುಳ್ಳಿರಿಸಿದನು ಮುನಿವರರ

ಎಡದ ಕಡೆಯಲಿ ಕಪಿಕುಲೇಂದ್ರನ
ಗಡಣ ಬಲದಲಿ ರಾವಣಾನುಜ
ಸಡಗರದಿ ಮುನಿನಿಕರವಿದಿರಲಿ ಹಿಂದೆ ವಾನರರು
ಮಡದಿ ಲಕ್ಷ್ಮಣದೇವರಿರ್ವರು
ಬಿಡದೆ ಚಿಮ್ಮಲು ಚಾಮರಂಗಳ
ಪೊಡವಿಪತಿ ಶ್ರೀರಾಮ ಸಿಂಹಾಸನದಿ ರಂಜಿಸಿದ

ಅಲ್ಲಿ ನೆರೆದ ಮಹಾಮುನೀಶ್ವರ
ರೆಲ್ಲ ತರಸಿದರಖಿಳ ವಸ್ತುವ
ಬೆಲ್ಲ ಸಕ್ಕರೆ ಜೇನುತುಪ್ಪ, ರಸಾಯನಂಗಳಲಿ
ಭುಲ್ಲವಿಸಿ ರಚಿಸಿದ ಸುಭಕ್ಷಗ
ಳೆಲ್ಲವನು ತುಂಬಿದರು ಹೆಡಗೆಗ
ಳಲ್ಲಿ ಜೋಡಿಸಿ ಹೊರಿಸಿ ತಂದರು ರಾಮನೋಲಗಕೆ

ತಂದು ಶಿಷ್ಯರು ಭಕ್ಷಗಳ ಮುದ
ದಿಂದ ಸುರಿಯಲು ನೋಡಿ ನಸುನಗೆ
ಯಿಂದ ರಘುಕುಲಸಾರ್ವಭೌಮನು ಕರಸಿ ನಿಜಬಲಕೆ
ಅಂದು ಕೊಡಿಸಲು ನೋಡಿದರು ರುಚಿ

ಯಿಂದ ಸವಿದರು ಪೂಜೆಗಳನಾ
ನಂದದಲಿ ಕೊಂಡಾಡಿದರು ವಾನರರು ಮುನಿವರರ

ಅನಿಲಸುತ ಬಾರೆಂದು ರಘುನಂ
ದನನು ಕರುಣದೊಳಿದರ ರುಚಿಯೆಂ
ತೆನಲು ಕರಗಳ ಮುಗಿದು ಬಿನ್ನೈಸಿದನು ರಘುಪತಿಗೆ
ಇನಕುಲಾನ್ವಯತಿಲಕ ಚಿತ್ತೈ
ಸೆನಗೆ ಸವಿಯಹುದಿನ್ನು ಧಾನ್ಯದ
ತನುವನೀಕ್ಷಿಸಬೇಕು ದೇವರು ತರಿಸಿ ನೀವೆಂದ

ಎನಲು ರಾಮನೃಪಾಲ ಗೌತಮ
ಮುನಿಯನೀಕ್ಷಿಸಬೇಕು ಸಲೆ ತರಿ
ಸೆನಲು ಧಾನ್ಯವನೊಡನೆ ಯಾಲೋಚಿಸಿದರೀ ಹದನ
ಮನನಲಿದು ತಂತಮ್ಮ ಶಿಷ್ಯರ
ವಿನಯದಿಂದಲಿ ಕರೆಸಿ ತಾರೆಂ
ದೆನಲು ಮೆರೆದರು ತಳುವದರನು ತಂದು ಸಭೆಯೊಳಗೆ

ನರೆದಲೆಗನಿದು ನೆಲ್ಲು ಹಾರಕ
ಬರಗು ಜೋಳವು ಕಂಬು ಸಾಮೆಯು
ಉರುತರದ ನವಣೆಯಿದು ನವಧಾನ್ಯವೆಂದೆನಲು
ಮೆರೆವ ರಾಸಿಯ ಕಂಡುಯಿದರೊಳು
ಪರಮಸಾರದ ಹೃದಯನಾರೆಂ
ದರಸಿ ಕೇಳಿದನಲ್ಲಿರುತಿಹ ಮಹಾಮುನೀಶ್ವರರ

ಕೆಲರು ಗೋಧಿಯ ಸಾಮೆಯನು ಕೆಲ
ಕೆಲರು ನವಣೆಯ ಕಂಬು ಜೋಳವ
ಕೆಲರು ಹಾರಕನೆಂದು ಕೆಲವರು ನೆಲ್ಲನತಿಶಯವ
ಕೆಲರು ನರೆದಲಗನನು ಪತಿಕರಿ
ಸಲದ ನೋಡಿದ ನೃಪತಿಯದರೊಳು
ಹಲವು ಮತವೇಕೊಂದನೇ ಪೇಳೆಂದ ಗೌತಮನು

ದಾಶರಥಿ ಚಿತ್ತೈಸು ನಮ್ಮಯ
ದೇಶಕತಿಶಯ ನರೆದಲಗನೇ

ವಾಸಿಯುಳ್ಳವನೇತ ಮಿಕ್ಕಿನ ಧಾನ್ಯವೇಕೆನಲು
ಲೇಸನಾಡಿದ ಮುನಿಪ ಗೌತಮ
ದೋಷರಹಿತನು ಪಕ್ಷಪಾತವ
ನೀಸು ಪರಿಯಲಿ ಮಾಡುವರೆ ಶಿವಯೆಂದನಾ ವ್ರಿಹಿಗ

ಎಲ್ಲ ಧರ್ಮದ ಸಾರವನು ನೀವ್
ಬಲ್ಲಿರರಿಯದೆಯೆಲ್ಲರನು ನೀ
ವಿಲ್ಲಿ ನುಡಿವ ಯುಪೇಕ್ಷೆಯುಂಟೇ ಸಾಕದಂತಿರಲಿ
ನೆಲ್ಲು ನಾನಿರೆ ಗೋಧಿ ಮೊದಲಾ
ದೆಲ್ಲ ಧಾನ್ಯಗಳಿರಲುಯಿದರಲಿ
ಬಲ್ಲಿದನು ನರೆದಲೆಗ ನೆಂಬುದಿದಾವ ಮತವೆಂದ

ಏನೆಲವೊ ನರೆದಲೆಗ ನೀನು ಸ
ಮಾನವೇ ಯೆನಗಿಲ್ಲಿ ನಮ್ಮನು
ದಾನವಾಂತಕ ಬಲ್ಲನಿಬ್ಬರ ಹೆಚ್ಚು ಕುಂದುಗಳ
ಜಾನಕಿ ಪತಿಯ ಸನಿಹದಲಿ ಕುಲ
ಹೀನ ನೀನು ಪ್ರತಿಷ್ಠ ಸುಡು ಮತಿ
ಹೀನ ನೀನೆಂದೆನುತ ಖತಿಯಲಿ ಬೈದು ಭಂಗಿಸಿದ

ಲೋಕದಲಧಿಕ ಭೋಜನವಿದೆಂ
ದಾಕೆವಾಳರು ಬುಧರು ಜರೆದು ನಿ
ರಾಕರಿಸಿ ಬಿಡಲಂತು ನೀ ಶೂದ್ರಾನ್ನವಾದೆಯಲ
ನಾಕನಿಳೆಯರು ಸಾಕ್ಷಿ ನಿನ್ನ ವಿ
ವೇಕಿಗಳು ಮೆಚ್ಚುವರೆ ಬಾಹಿರ
ಸಾಕು ನಡೆ ನೀನಾವ ಮಾನ್ಯನು ಕಡೆಗೆ ತೊಲಗೆಂದ

ಕ್ಷಿತಿಯಮರರುಪನಯನದಲಿ ಸು
ವ್ರತ ಸುಭೋಜನ ಪರಮ ಮಂತ್ರಾ
ಕ್ಷತೆಗಳಲಿ ಶುಭಶೋಭನದಲಾರತಿಗೆ ಹಿರಿಯರಲಿ
ಕ್ರತುಗಳೆಡೆಯೊಳಗರಮನೆಯಲಿ
ಪ್ರತಿದಿನವು ರಂಜಿಸುತ ದೇವರಿ
ಗತಿಶಯದ ನೈವೇದ್ಯ ತಾನಹೆನೆಂದನಾ ವ್ರಿಹಿಗ

ಜನಪರಿಗೆ ಶಿಶುಗಳಿಗೆ ಬಾಂಧವ
ಜನರೆಡೆಗೆ ಬ್ರಹ್ಮರ ಸಮಾರಾ
ಧನೆಗೆ ವಿದ್ಯಾರಂಭ ಕಾಲಕೆ ಸಕಲ ಭೂಸುರರ
ಮನೆಗಳಲಿ ಹರಿದಿವಸದೌಪಾ
ಸನೆಗಳಲಿ ತಾ ಯೋಗ್ಯನಹುದೆಂ
ದೆನಿಸಿಕೊಂಬೆನು ನೀನಯೋಗ್ಯನು ಭ್ರಷ್ಟತೊಲಗೆಂದ

ಹೊಸ ಮನೆಯ ಪುಣ್ಯಾರ್ಚನೆಗೆ ಮಿಗೆ
ಯೆಸೆವ ಮದುಮಕ್ಕಳಿಗೆ ಸೇಸೆಗೆ
ವಸುಮತೀಶರ ಗರುಡಿಯಲಿ ಶಸ್ತ್ರಾಸ್ತ್ರದರ್ಚನೆಗೆ
ಎಸೆವ ವಿಪ್ರರ ಫಾಲದಲಿ ರಂ
ಜಿಸುವ ಗಂಧಾಕ್ಷತೆಯಹೆನು ಭಾ
ವಿಸಲು ಲೋಕದೊಳಾರು ಸರಿಯಿಂತೆದನಾ ವ್ರಿಹಿಗ

ಧರಣಿಯಮರರು ಮಂತ್ರತಂತ್ರೋ
ಚ್ಚರಣೆಯಲಿ ಹಸ್ತಾಂಬುಜದಿ ಮಿಗೆ
ಹರಸಿ ಕೊಡಲಕ್ಷತೆಯ ಮಂಡೆಯೊಳಾಂತ ಮಹಿಮರಿಗೆ
ದುರಿತ ದುಃಖ ವಿನಾಶ ಮಂಗಳ
ಕರವಹುದು ತಾನೀವೆ ಸಂತತ
ಸಿರಿಯ ಸಂಪತ್ತಾಯುವನು ಕೇಳೆಂದನಾ ವ್ರಿಹಿಗ

ಪರಿಮಳದ ಚಂದನದ ತರುವಿಗೆ
ಸರಿಯೆ ವೊಣಗಿದಕಾಷ್ಠ ಗೋವದು
ಕರೆದ ಹಾಲಿಗೆ ಕುರಿಯ ಹಾಲಂತರವೆ ಭಾವಿಸಲು
ಪರಮ ಸಾಹಸಿ ವೀರ ಹನುಮಗೆ
ಮರದ ಮೇಲಣ ಕಪಿಯು ತಾನಂ
ತರವೆ ಫಡ ನೀನೆನಗೆ ಸರಿಯೇ ಭ್ರಷ್ಟ ತೊಲಗೆಂದ

ಸುರನದಿಗೆ ತಾ ಸರಿಯೆ ಕಾಡೊಳು
ಹರಿವ ಹಳ್ಳದ ನೀರು ಗರುಡನ
ಮರಿಗೆ ಹದ್ದಂತರವೆ ಹಂಸಗೆ ಬಕನು ಹೋಲುವುದೆ

ಸರಸ ಮರಿ ಕೋಗಿಲೆಗೆ ವಾಯಸ
ನಣಕಿಸುವ ತೆರನಾಯ್ತು ಸಾಕಿ
ನ್ನರೆದಲಗ ನೀನಾವ ಮಾನ್ಯನು ಕಡೆಗೆ ತೊಲಗೆಂದ

ನುಡಿಯ ಕೇಳುತ ಕನಲಿ ಕಂಗಳು
ಕಿಡಿಮಸಗಿ ಖತಿಗೊಂಡು ನುಡಿದನು
ಸಿಡಿಲ ಘರ್ಜನೆಯಂತೆ ಸಭೆಯಲಿ ಜರೆದನಾ ವ್ರಿಹಿಯ
ನುಡಿಗೆ ಹೇಸದ ಭಂಡ ನಿನ್ನೊಳು
ಕೊಡುವರೇ ಮಾರುತ್ತರವ ಕಡು
ಜಡನಲಾ ನಿನ್ನೊಡನೆ ಮಾತೇಕೆಂದ ನರೆದಲಗ

ಸತ್ಯಹೀನನು ಬಡವರನು ಕ
ಣ್ಣೆತ್ತಿ ನೋಡೆ ಧನಾಢ್ಯರನು ಬೆಂ
ಬತ್ತಿ ನಡೆವವುಪೇಕ್ಷೆ ನಿನ್ನದು ಹೇಳಲೇನದನು
ಹೆತ್ತ ಬಾಣಂತಿಯರು ರೋಗಿಗೆ
ಪತ್ಯ ನೀನಹೆ ಹೆಣದ ಬಾಯಿಗೆ
ತುತ್ತು ನೀನು ನಿನ್ನ ಜನ್ಮ ನಿರರ್ಥಕರವೆಂದ

ಸತ್ತದಿನದಾರಭ್ಯ ಮನುಜರು
ಮತ್ತೆ ಕರ್ಮವ ಹೊತ್ತು ಪಿಂಡವ
ನಿತ್ತುತ ತಪ್ಪದೆ ಮತ್ತೆ ವಾಯಸಕುಲವ ಕರಕರದು
ತುತ್ತನಿಡುವರು ಎಳ್ಳು ದರ್ಭೆಗೆ
ತೆತ್ತಿಗನು ನೀನಾದೆ ಕೀರ್ತಿಯ
ಹೊತ್ತುಕೊಂಡೆ ದುರಾತ್ಮ ನಿನ್ನೊಳು ಮಾತದೇಕೆಂದ

ಮಳೆದೆಗೆದು ಬೆಳೆಯಡಗಿ ಕ್ಷಾಮದ
ವಿಲಯಕಾಲದೊಳನ್ನವಿಲ್ಲದೆ
ಅಳಿವ ಪ್ರಾಣಿಗಳಾದರಿಸಿ, ಸಲಹುವೆನು ಜಗವರಿಯೆ
ಎಲವೊ ನೀನೆಲ್ಲಿಹೆಯೊ ನಿನ್ನಯ
ಬಳಗವದು ತಾನೆಲ್ಲಿಹುದುಯಿ
ಹಲವು ಹುಲು ಧಾನ್ಯಗಳೆನಗೆ ಸರಿದೊರೆಯೆ ಕೇಳೆಂದ

ಬಲ್ಲಿದರು ಒರೆ ಬಡವರಲಿ ನಿ
ನ್ನಲ್ಲಿಯುಂಟು ವುಪೇಕ್ಷೆ ನಮ್ಮಲಿ
ಸಲ್ಲದೀ ಪರಿ ಪಕ್ಷಪಾತ ವದಿಲ್ಲ ಭಾವಿಸಲು
ಬಲ್ಲಿದರು ಬಡವರುಗಳೆನ್ನದೆ
ಎಲ್ಲರನು ರಕ್ಷಿಸುವೆ ನಿರ್ದಯ
ನಲ್ಲ ತಾ ನಿನ್ನಂತೆ ಎಲ ಕುಟಿಲಾತ್ಮ ಹೋಗೆಂದ

ನಾನೆಲೈ ಲೋಕದಲು ನಿರ್ದಯನು ಬಳಿ
ಕೇನ ಸದ್ಧರ್ಮದಲಿ ಮಧು
ಪಾನವಾದೆಯಲಾ ದುರಾತ್ಮಕ ನಿನ್ನ ಸೇವಿಸಿದ
ದಾನವರು ಮಾನವ ಕಿರಾತರು
ಜ್ಞಾನವಳಿದು ವಿಕಾರದಲಿ ಮತಿ
ಹೀನರಾದರು ನಿನ್ನ ಗುಣವೇನೆಂದನಾ ವ್ರಿಹಿಗ

ಆಡಬಹುದತಿಶಯವ ನೀ ಕೊ
ಡಾಡಿ ಕೊಂಬರೆ ಸಾಕು ಸಜ್ಜನ
ರಾಡಿದರೆ ಪತಿಕರಿಸಿ ಲಜ್ಜೆಗೆ ಸಿರವ ಬಾಗುವರು
ನೋಡಿರೈ ಸಭೆಯವರು ದುರ್ಮತಿ
ಗೇಡಿ ಯಿವನಾಡುವದ ನಾವಿ
ನ್ನಾಡಿದರೆ ಹುರುಳಿಲ್ಲ ಶಿವಶಿವಯೆಂದ ನರೆದಲಗ

ಸತ್ತವರ ಪ್ರತಿಬಿಂಬರೂಪನು
ಬಿತ್ತರಿಸಿ ಪಿತೃನಾಮಗಳ ನಿನ
ಗಿತ್ತು ಮೂವರ ಪೆಸರಿನಲಿ ಕರೆಕರೆದು ದರ್ಭೆಯಲಿ
ನೆತ್ತಿಯನು ಬಡಿ ಬಡಿದು ಕಡೆಯಲಿ
ತುತ್ತನಿಡುವರು ಪಶುಗಳಿಗೆ ನೀ
ನೆತ್ತಿದೆಯೆಲಾ ತನುವ ಸುಡಬೇಕೆಂದ ನರೆದಲೆಗ

ಏನಿಹಿರಿ ಹಿರಿಕಿರಿದ ನುಡಿಯದೆ
ಮೌನದೀಕ್ಷಿತರಾದಿರಲ ಕಂ

ಡೇನು ಮುರಿದಾಡುವರ ಸಾಧ್ಯವೊ ಸಾಧ್ಯವೋ ನಿಮಗೆ
ಈ ನಪುಂಸಕನಲಿ ನಿರಂತರ
ವೇನು ಕಾರಣ ವಾದವಿದು ನಮ
ಗೇನು ಬುದ್ದಿಯನರುಹುವಿರಿ ಪೇಳೆಂದ ನರೆದಲೆಗ

ಮಸೆ ದುದಿತ್ತಂಡಕ್ಕೆ ಮತ್ಸರ
ಪಿಸುಣ ಬಲರತಿ ನಿಷ್ಠರರು ವಾ
ದಿಸಲು ಕಂಡನು ನೃಪತಿ ಮನದಲಿ ನೋಡಿ ನಸುನಗುತ
ಹಿಸುಣರಿವದಿರ ಮತ್ಸರವ ಮಾ
ಣಿಸುವ ಹದನೇನೆನುತ ಯೋಚಿಸಿ
ದಸುರ ಮುನಿಪರ ನೋಡ ಗೌತಮ ಮುನಿಪನಿತೆಂದ

ಅರಸುಗಳು ನಾವೆಲ್ಲ ಭೂಮೀ
ಸುರರು ನೆರದಿಹ ದಾನವರು ವಾ
ನರರು ನಮಗೀ ನ್ಯಾಯವನು ಪರಿಹರಿಸಲಳವಲ್ಲ
ಕರಸುವೆವು ಹರಿಹರವಿರಿಂಚಾ
ದ್ಯರನಯೋಧ್ಯೆಗೆ ಯಿವರ ಗುಣವಾ
ಧರಿಸಿ ಪೇಳ್ವರು ನಯದೊಳೆಂದನು ರಾಮ ನಸುನಗುತ

ಪರಮ ಧಾನ್ಯದೊಳಿಬ್ಬರೇ ಇವ
ರಿರಲಿ ಸೆರೆಯೊಳಗಾರು ತಿಂಗಳು
ಹಿರಿದು ಕಿರಿದೆಂಬಿವರ ಪೌರುಷವರಿಯ ಬಹುದಿನ್ನು
ಪುರಕೆ ಗಮನಿಸಿ ನಾವು ನಿಮ್ಮನು
ಕರಸುವೆವು ಕೇಳೆನುತಯೋಧ್ಯಾ
ಪುರಿಗೆ ಪಯಣವ ಮಾಡಹೇಳಿದನಾ ವಿಭೀಷಣಗೆ

ಸೆರೆಗೆ ನಮ್ಮನು ನೂಕಿ ದೇವರು
ಸಿರಿಯ ಮದದಲಿ ಕಳೆದರೆಮ್ಮನು
ಮರದು ಸಲಹುವರಾರು ನಿಮ್ಮಯ ಕರುಣ ಹೊರತಾಗಿ
ಧರೆಯೊಳಿನ್ನಪಕೀರ್ತಿ ನಾರಿಯ

ಸೆರಗ ಹಿಡಿವುದೆ ಲೇಸೆನುತ ತವೆ
ಕರಮುಗಿದು ತಲೆಗುತ್ತಿ ಪೇಳಿದನಾಗ ನರೆದಲಗ

ಆಗಲದಕೇನೆಂದು ಕರುಣಾ
ಸಾಗರನು ಬೀಳ್ಕೊಟ್ಟನವರನು
ಯೋಗಿಗಳ ವಶಮಾಡಿ ಗೌತಮಮುನಿಯನುಪಚರಿಸಿ
ರಾಗ ಮಿಗೆ ಮುನಿವರರನಲ್ಲಿಸ
ರಾಗದಿಂದಲೆ ಕಳುಹಿ ಬಳಿಕಾ
ಯಾಗ ಸಂರಕ್ಷಕನು ವೀಳೆಯವಿತ್ತನನಿಬರಿಗೆ

ಅರಸ ಕೇಳ್ಮರುದಿವಸದಲಿ ರಘು
ವರನು ತನ್ನೋಲಗಕೆ ನೃಪರನು
ಕರೆಸಿದನು ನಿಜಮಂತ್ರಿ ಬಾಂಧವಜಾಲವರ್ಗವನು
ತರಣಿಸುತ ಜಾಂಬವ ವಿಭೀಷಣ
ರಿರದೆ ಬಂದರು ಕೈಮುಗಿದು ಕು
ಳ್ಳಿರಲು ಪರಿತೋಷದಲಿ ನುಡಿದನು ರಾಮ ನಸುನಗುತ

ಕೇಳು ಲಕ್ಷ್ಮಣ ಕೇಳು ಜಾಂಬವ
ಕೇಳು ನಳ ನೀಲಾದಿ ಸುಭಟರು
ಕೇಳಿರೈ ನರೆದಲಗವಿಪ್ರಹಿಯರು ಸೆರೆಯೊಳಿರ್ದವರ
ಕಾಲ ಸವೆದುದು ದಿವಸವಿಂದಿಗೆ
ಏಳು ತಿಂಗಳು ಕಳೆದರವದಿರ
ಪಾಲಿಸಲು ಬೇಗ ನಿಲಸುತ ನೀ ಕರೆದು ತಾರೆಂದ

ಹೈ ಹಸಾದವೆನ್ನುತ್ತ ವಂದಿಸೆ
ಬಾಹುಬಲದಗ್ಗಳಿಕೆಮಿಗೆ ನಿ
ರ್ವಾಹದಲಿ ಹೊರವಂಟನತಿ ವೇಗದಲಿ ಪಥವಿಡಿದು
ಸಾಹಸವನೇನೆಂಬೆ ವಜ್ರದ
ದೇಹನಲ್ಲಾ ಹನುಮ ತನ್ನ ಮ
ನೋಹರದ ರುಷಿಗಳನು ಕಂಡನು ಪಂಚನದಿಯಲಿ

ಅವರ ಪಾದಾಂಬುಜಕೆ ವಂದಿಸಿ
ಪವನಸುತ ಬಿನ್ನೈಸಿದನು ರಾ
ಘವ ನೃಪಾಲನು ಕಳುಹೆ ಬಂದೆನು ನಿಮ್ಮ ದರುಶನಕೆ
ಅವಧಿ ಸವೆದುದು ಸೆರೆಮನೆಯೊಳಿ
ರ್ದವರನೊಡಗೊಂಡೀಕ್ಷಣವೆ ನೀ
ವವನಿಪನ ಸಂಮುಖಕೆ ಚಿತ್ತೈಸೆಂದು ಕೈಮುಗಿದ

ಹನುಮನಾಡಿದ ನುಡಿಗೆ ಗೌತಮ
ಮುನಿಪ ನಸುನಗುತೆದ್ದು ಬನದಲಿ
ಘನತಪೋಬಲ ಮಹಿಮರನು ಕರೆಸಿದನುತಳವೇಗದಲಿ
ಮನದಿ ಹರುಷಿತನಾಗಿ ಮುನಿ ಸರೆ
ಮನೆಯ ಪ್ರತಿವಾದಿಗಳನೊಡಗೋ
ಡನುಪಮಿತ ಗುಣನಿಲಯ ಮುನಿ ಹೊರವಂಟನಾಶ್ರಮವ

ಬಂದನತಿಹರುಷಲಿ ಮುನಿಕುಲ
ವೃಂದದೊಡನೈತರಲು ರಘುಕುಲ
ನಂದು ಬಿಜಯಯಂಗೈಸೆ ತಂದನು ರಾಮಜಂದಿರಕೆ
ಬಂದರೇ ಪ್ರತಿವಾದಿಗಳು ಕರ
ತಂದಿರೇ ನೀವೆನುತ ಮುನಿಕುಲ
ವೃಂದವನು ಸಕ್ಕರಿಸಿ ಕುಳ್ಳಿರಿಸಿದನು ಗೌತಮನ

ಇವರ ವ್ಯವಹಾರವನು ಪರಿಹರಿ
ಸುವ ವಿಚಾರವ ನೋಡಿ ಮನದಲಿ
ರವಿ ಕುಲಾನ್ವಯ ರಾಮ ನೆನೆದನು ಹೃದಯ ಶುದ್ಧಿಯಲಿ
ಶಿವನ ಧ್ಯಾನಿಸಲಾ ಕ್ಷಣವೆ ತ್ರೈ
ಭುವನಕರ್ತರು ಇಂದ್ರ ಮೊದಲಾ
ದವರು ಬಂದರಯೋಧ್ಯಪುರಪತಿಧಾಮನೋಲಗಕೆ

ವಸುಗಳಮರರು ಭುಜಂಗಾಮರ
ರಸುರ ಕಿನ್ನರ ಯಕ್ಷ ರಾಕ್ಷಸ
ಶಶಿರವಿಗಳಾದಿತ್ಯ ವಿದ್ಯಾಧರರು ಗುಹ್ಯಕರು

ವಸುಧೆಯಮರರು ಕ್ಷತ್ರಿಯರು ಜೋ
ಯಿಸರು ವೈಶ್ಯ ಚತುರ್ಥರುನ್ನತ
ಕುಶಲ ವಿದ್ಯಾಧಿಕರು ನೆರೆದುದು ನೃಪನ ಸಭೆಯೊಳಗೆ

ಇಂತೆಸೆವನಾ ಸಭೆಯೊಳಗೆ ಮತಿ
ವಂತ ನುಡಿದನು ಧಾನ್ಯವರ್ಗದ
ಸಂತತಿಯ ಬರಹೇಳಿಯೆನೆ ಸೆರೆಮನೆಯೊಳಿರ್ದವರು
ನಿಂತು ಕರಗಳ ಮುಗಿದು ಧರಣೀ
ಕಾಂತ ರಘುವರನೀ ಸುಬುದ್ಧಿಯ
ನೆಂತು ನಮಗರುಹುವಿರಿಯದ ಪೇಳೆಂದ ನರೆದಲೆಗ

ಎನಲು ರಾಮನೃಪಾಲ ನೋಡಿದ
ಘನ ತಪೋಮಹಿಮರಿಗೆ ನುಡಿದನು
ಮನವ ವಂಚಿಸಲಾಗದೀ ಧರ್ಮವನು ನೆರೆತಿಳಿದು
ಅನುನಯದಿ ಪೇಳೆನೆ ಮುನೀಂದ್ರರು
ಅನಿಮಿಷರನೀಕ್ಷಿಸಿದರಲ್ಲಿ ಯ
ಘನ ಮಹಾಸಭೆಯೊಳಗೆ ಭಾರ್ಗವ ರಾಮನಿಂತೆಂದ

ಆರು ನುಡಿಯರೆ ನೀವು ಹಿರಿಯರು
ಮೀರಿಸುವರಾರಿ ವರೊಳಗೆ ಗುಣ
ಸಾರನಾವನು ಪೇಳೆನಲು ಜಂಭಾರಿ ನಸುನಗುತ
ಸಾರಹೃದನು ನರೆದಲಗ ನಿ
ಸ್ಸಾರನೀ ವ್ರಿಹಿಯೆನಲು ಗುಣನಿಧಿ
ಮಾರುತಾತ್ಮಜ ನೋಡಿದನು ಸನ್ನೆಯಲಿ ನಾರದನ

ಅಹುದು ಸುರಪನ ಮಾತು ನಿಶ್ಚಯ
ವಹುದು ನರೆದಲೆಗನೆ ಸಮರ್ಥನು
ಬಹಳ ಬಲಯುತ ಸೆರೆಗೆ ತಳ್ಳಲು ಕಾಂತಿಗೆಡಲಿಲ್ಲ
ಸಹಜವಿದು ಪರಪಕ್ಷವಾದಡೆ
ವಿಹಿ ಕರಗಿ ಕಂದಿದನು ಸೆರೆಯಲಿ
ವಿಹಿತವಿದು ಕೇಳೆಂದು ನಾರದ ನುಡಿದ ನಸುಗುತ

ಎಲ್ಲ ನವಧಾನ್ಯದಲಿ ಈತನೆ
ಬಲ್ಲಿದನು ಹುಸಿಯಲ್ಲ ಬಡವರ
ಬಲ್ಲಿದರ ನಾರೈದು ಸಲಹುವನಿವಗೆ ಸರಿಯುಂಟೆ
ನೆಲ್ಲಿನಲಿ ಗುಣವೇನು ಭಾಗ್ಯದಿ
ಬಲ್ಲಿದರ ಪತಿಕರಿಸುವನು ಅವ
ನಲ್ಲಿ ಸಾರವಕಾಣೆಯೆಂದನು ಕಪಿಲಮುನಿ ನಗುತ

ಸುರಮುನಿಗಳಿಂತೆನಲು ಭೂಸುರ
ವರರು ಸಂತೋಷಿಸಲು ಸಭಿಕರು
ನರೆದಲಗ ನೀ ಬಾರೆನುತ ರಾಮನೃಪಾಲ ನೆರೆಮೆಚ್ಚಿ
ಕರೆದುಕೊಟ್ಟನು ತನ್ನ ನಾಮವ
ಧರೆಗೆ ರಾಘವನೆಂಬ ಪೆಸರಾ
ಯ್ತಿರದೆ ವ್ರಿಹಿ ನಾಚಿದನು ಸಭೆಯಲಿ ಶಿರವ ಬಾಗಿಸಿದ

ಹರುಷದೋರಿದ ಮನದಿ ನಲಿವುತ
ನರೆದಲಗನೈತಂದು ರಾಮನ
ಸಿರಿಚರಣಕಭಿನಮಿಸೆ ದೇವಾಸುರರು ಕೊಂಡಾಡೆ
ಅರಸಿ ಮುತ್ತಿನ ಸೇಸೆಯನು ಭೂ
ಸುರರು ಮಂತ್ರಾಕ್ಷತೆಯನಿತ್ತುಪ
ಚರಿಸಿದರು ರಾಗಿಯನು ಪೊಗಳಿದರಲ್ಲಿ ಮುನಿವರರು

*********

## 4. ಕಿರುವೆರಳ ಸಟೆ

**– ರತ್ನಾಕರವರ್ಣಿ**

ಭರತೇಶ ಸೆಜ್ಜೆ ವನೆಯೊಳೊರಗಿದನಂದಿ
ನಿರುಳ ಮೂರನೆಯ ಜಾವದೊಳು
ಪರಮಾತ್ಮಯೋಗದೊಳಿದ್ದ ನಷ್ಟರೊಳೊಂದು
ಸರಸಾರ್ಥ ಹುಟ್ಟಿತೇನೆಂಬೆ

ಮರನಲುಗದ ಮಾತು ಹುಟ್ಟದ ಹೊತ್ತದು
ತೆರೆನಿಂದ ಕಡಲಂತೆ ಕಟಕ
ಪರವಶವಾಗಿದ್ದು ದಿಬ್ಬರೆಚ್ಚತ್ತು ಭೂ
ವರನನಿಂತೆನುತಿದ್ದ ರಾಗ

ಹನಿಗೂಡಿ ಹಳ್ಳ ನಾರೊಡಗೂಡಿ ಹಗ್ಗವೆಂ
ಬನ್ನುವಿನೊಳ್ಪಡೆಗೂಡಿ ಚಕ್ರಿ
ಘನತೆವೆತ್ತನು ಸೇನೆಹೊರತಾದರಿವನೊಬ್ಬ
ಮನುಜನಲ್ಲವೆಯೆಂದರವರು

ಅಹುದಹುದಾನೆಕುದುರೆ ಮೊದಲಾದ ಸಂ
ಗ್ರಹದೋರಿ ಜನರನಂಜಿಸಿದ
ಸಹಜಶಕ್ತಿಯ ನೋಡಲೀತಗೇನುಂಟಾವ
ಮಹಿಮೆ ನಮ್ಮಂತೆಂದರೊಡನೆ

ಕಟ್ಟಕಡೆಯ ಕಟಕದೊಳಿಬ್ಬರಾಡುವ
ಸಟ್ಟಾಟವನುಚಕ್ರಧರನು
ನಟ್ಟ ನಡುವೆ ತೋರ್ಪ ಸೆಜ್ಜೆ ವನೆಯೊಳಿದ್ದು
ತೊಟ್ಟನೆ ಕೇಳನೇನೆಂಬೆ

ರವಿಯೊಳಗಣ ಪ್ರತಿಮೆಯ ಕಾಣ್ಬನವನಕ್ಷಿ

ಕಿವಿಗಳಾ ಕಡೆಯ ಪಾಳೆಯದ
ರವಗೇಳ್ವವೆನಲವನಿಂದ್ರಿಯಶಕ್ತಿಯ
ಹವಣಿಸಬಹುದೆ ಲೋಕದೊಳು

ಭಾವಮೈದುನರು ಖೇಚರರವರಾಡಲಾ
ಭೂವರ ಕೇಳ್ದಿರ್ದನಂದು
ಭಾವದಿ ಪ್ರಕಟಿಸಬೇಕೆಂದು ನೆರೆದಿದ್ದ
ತಾವರೆಯೋಪ ಮೂಡಿದನು

ದೇವತಾರ್ಘ್ಯವನಿತ್ತು ಕಡೆಯ ಚಾವಡಿಗೆಯ್ದಿ
ಠೀವಿಯಿಂದೋಲಗವಾದ
ಭಾವಶುದ್ಧದೊಳೆಲ್ಲರೆಯಂದು ಕಂಡು ಸ
ಭಾವಾಸತುಂಬಿದ್ದರಾಗ

ಮೊಗವನಲ್ಪವ ಮಾಡಿಕೊಂಡು ಮೋನದೊಳು ಗ
ದ್ದುಗೆಯೇರಿ ಚಕ್ರೇಶನಿರಲು
ಮುಗುಳಂಬ ಮಲೆತ ಚಿಂತೆಯೆಯೆಂದು ನೆನೆವುತ
ಮಿಗೆ ಪೊರ್ದಿ ಮಂತ್ರಿಯಿಂತೆಂದ

ಚಿಂತೆ ಬೇಡೆಂದೆಮಗರುಹಿ ದೇವರಿದೇನ
ಚಿಂತಿಪುದೆನೆ ಕೇಳ್ದು ನೃಪತಿ
ಕಂತುವಿಗೆಣಿಸೆನ್ನೈ ನರ ಬಿಗಿದೆನ್ನನು
ಚಿಂತೆಗೊಳಿಸುತಿದೆಯೆಂದ

ಪರಿಕಿಪೆವೆಲ್ಲೆಲ್ಲಿಯೆಂದ ಮಂತ್ರಿಗೆ ಕಿರು
ವೆರಲ ಸಟೆಗೆ ಡೊಂಕುಮಾಡಿ
ಅರಸ ತೋರಿದನದು ತುದಿಬಾಗಿದೊಂದು ಪೂ
ಸರಲಂತೆ ಕಣ್ಣೆ ಮೋಹಿಸಿತು

ಧರೆಯೊಳೆಲ್ಲರ ನಡೆನುಡಿ ಡೊಂಕು ಭರತಭೂ
ವರಗೆ ಡೊಂಕಣುಮಾತ್ರವಿಲ್ಲ

ಪೊರೆವುದಿದಕೆ ದೃಷ್ಟಿಪಾತವೆಂದರೆ ಜಾವ
ಬೆರಲು ಡೊಂಕಿತೊಯೆನಲೆಸೆದ

ಬೆಕ್ಕಸಬಟ್ಟು ಮರುಗಿ ಮಂತ್ರಿಮಿತ್ರರು
ಸುಕ್ಕಿದಂಗುಲಿಯ ಮುಟ್ಟಿದೊಡೆ
ಠಕ್ಕಿಗಾ ನೃಪ ಜಿನಪತಿಯೆಂದು ಮೋರೆಯ
ಕೊಕ್ಕಿಸಿಕೊಂಡು ಮೈದೆಗೆವ

ಮರುಗಿ ಕುವರರೆಲ್ಲ ಪರಿತಂದು ತಂದೆಯ
ಕಿರುವೆರಳನು ಮುಟ್ಟಿ ನೋಡೆ
ಬರಿದಿಷ್ಟು ನರಳುತ ಗುರುಹಂಸನಾಥಯೆಂ
ದೊರಗುಮೂಡೆಯನೊರಗಿದನು

ದೊರೆಗಳೆಲ್ಲರು ಚಿಂತೆಗೊಳುತಿದ್ದರಾ ಮಂತ್ರಿ
ಕರೆಸಿದ ರಾಜವೈದ್ಯರನು
ವರಮೂಲಿಕಾಸಾರಸಿದ್ಧ ತೈಲವ ಪೂಸಿ
ಸರಿತಮಾಡುವೆವೆಂದರವರು

ಮಂತ್ರೀಶ ಬಳಿಯಟ್ಟೆ ಬಂದರಾಗಳೆ ದಿವ್ಯ
ಮಂತ್ರವಾದಿಗಳು ಲಗ್ಗೆಯೊಳು
ಮಂತ್ರಿಸಿ ನೇರಮಾಡುವೆವಿದ ನೋಡೆಮ್ಮ
ಮಂತ್ರಶಕ್ತಿಯನೆಂದರವರು

ಯಂತ್ರಸಿದ್ಧರು ಬಂದರಿದಕೆ ಬೀಜಾಕ್ಷರ
ಮಂತ್ರವ ಬರೆದು ಕಟ್ಟಿದರೆ
ಜಂತ್ರ ಪರಿದ ಬಿಲ್ಲು ನಿಮಿರಿದಂತಹುದೆಲೆ
ಮಂತ್ರೀಶ ನೋಡೆಂದರೊಡನೆ

ಜಟ್ಟಿಗಳೆಯ್ದಿ ನೋಡಿದರು ನಾವೊಯ್ಯನೆ
ನೆಟ್ಟಿ ದೆಗೆವೆಂದರೊಡನೆ
ನಿಟ್ಟಿಸಿ ಕವಿಗಳು ಹೊಸಕೃತಿವೇಳ್ದು ನಾಂ
ನೆಟ್ಟಗಾಗಿಪೆವೆಂದರೊಸೆದು

ಜಲವ ಹೊಕ್ಕಾವು ಮಂತ್ರಿಸಿ ನೇರಮಾಳ್ಪೆವೆಂ
ದುಲಿದರು ಬಂದ ಭೂಸುರರು
ಹಲಬರು ತಂತಮ್ಮ ಕಲಿತ ವಿದ್ಯಾರ್ಥದ
ಬಲುಹ ಸೂಚಿಸುತ್ತಿದ್ದರಾಗ

ಭನಾಥನಂಗವೈದ್ಯರು ಬಂದು ನಿಂದರು
ಮೂನೂರರುವತ್ತು ಮಂದಿ
ಸೇನೆಯೊಳುಳ್ಳ ಸರ್ವರು ಬಂದು ನೆರೆದರು
ನಾನು ಮಾಣಿಪೆನೆಂದರವರು

ಬಡವಗೆ ಬಲುರೋಗ ಬಂದು ಬಾಯ್ಬಿಡಲೊರ್ವ
ರೆಡಹಿಯಂ ಕಾಣರುರ್ವಿಯೊಳು
ಒಡವೆಯುಳ್ಳವಗಲ್ಪರುಜೆ ಬರೆ ವಿಸ್ಮಯ
ಬಡುತ ಸಾರುವರದು ಸಹಜ

ಇವರೊಳಾವುದು ದೇವ ನಿನಗಹುದೆನೆ ಮಂತ್ರಿ
ನವಗೀಗ ಕದನವುಂಟರಿಯ
ಇವು ಜೋಲಿಯೌಷಧಿಯಿಂದೆ ಮಾಣ್ಬೊಂದು ತಂ
ತ್ರವ ಪೇಳ್ವೆನಾನೆಂದ ನೃಪತಿ

ನೆಟ್ಟಿಯ ತೆಗೆದೊಮ್ಮೆ ನೋಡಿರ್ಕೆಯೆಂದಾಗ
ಜಟ್ಟಿಗಳಿಗೆ ಕೈಯ ನೀಡೆ
ಬೆಟ್ಟೆ ಮಾಡದ ಕೈಯನವರೊತ್ತಲರಸನ
ಬೆಟ್ಟಿದ್ದು ದಿನಿಸು ಸಡಿಲದೆ

ನೋವಿಗಂಜಿದರಾಗದೊತ್ತಿ ತೆಗೆವುದೆಂದು
ಭೂವರನುಸುರೆ ಜಟ್ಟಿಗಳು
ತಾವೊತ್ತಿ ಪಿಡಿಯಲೆತ್ತಿದನಾಗ ತೂಗುತ
ಬಾವಲಂತಿದ್ದರಂದವರು

ಸಾಲದೊಬ್ಬನ ಭಾರ ನೀವಿಬ್ಬರಾತನ
ಕಾಲುವಿಡಿದು ತೂಗಿರೆಂದ
ಸಾಲಾಗಿ ತೆಗೆವಾಗ ಮೇಲಕ್ಕೆತ್ತಿದನಕ್ಷ
ಮಾಲೆಯನೆತ್ತಿದಂದದೊಳು

ನಸುನೇರವಾಗದೆ ಬೆರಳಿದ್ದರಿನ್ನೊಂದು
ಪೊಸತಂತ್ರವುಂಟೆಂದು ನೃಪತಿ
ಮಿಸುನಿಯ ಸರಪಣಿಯೊಂದನಂಗುಲಿಗೆ ಪೋ
ಣಿಸಿ ತೂಗಿರೆಂದನೆಲ್ಲರಿಗೆ

ಹರದಾರಿ ಮುಟ್ಟೆಲ್ಲ ಸಾಲಾಗಿ ನಿಂದೆಂದು
ಸರಪಣಿವಿಡಿದು ತೆಗೆದರು
ಬೆರಳಿಷ್ಟು ಮಿಸುಕದು ಮತ್ತರೆಗಾವುದ
ಹರಿದು ತೆಗೆದರು ಖೋಯೆಂದು

ಇದರೊಳು ನೇರವಾಗದು ಚಕ್ರವರ್ತಿಯಿ
ನ್ನಿದಕೊಂದು ತಂತ್ರವುಂಟೆಂದ
ಇದಿರಲ್ಲಿ ನಿಂದಿರ್ದ ವಿಶ್ವಕರ್ಮನ ನೋಡಿ
ಸದಮಲಾನಂದನಿಂತೆಂದ

ಕಟಕವೆಲ್ಲಕೆ ಹಬ್ಬುವೊಲು ಸರಪಣಿಯ ಸಂ
ಘಟಿಸಿ ತಾ ಬೇಗದೊಳೆಂದ
ಸ್ಫುಟದಿ ನಿರ್ಮಿಸಿ ಕೊಟ್ಟನವ ಕೂಡೆ ಚಕ್ರಿಯ
ತುಟಿ ಮಿಸುಕಿದ ಕಾರ್ಯತಡವೆ

ಹಿಡಿದರಾಗಳೆ ತೇರ ಮಿಣಿಯಂತೆ ಕಟಕದ
ಕಡೆಮುಟ್ಟ ನಿಂದು ಸರಪಣಿಯ
ಎಡಬಲಕಲ್ಲಲ್ಲಿ ಕವಲಾಗಿ ಸರಪಣಿ
ನಡೆದುವು ದೆಸೆಮಿಣಿಯಂತೆ

ಹೊಡೆಬಳ್ಳಿಯೊಂದರ ಗಂಟುಗಂಟಿಗೆ ಕುಡಿ
ಯೊಡೆದೆಂಟುದೆಸೆಗೆ ಪೋಪಂತೆ

ನಿಡುಸರಪಣಿಯೊಂದು ಬಹುಸರಪಣಿ ತನ್ನ
ತೊಡರೆ ಹಬ್ಬಿತು ಕಂಡ ಕಡೆಗೆ

ಪಡೆಯೆಂಬ ಪಂದಲ ಮೇಲೊಂದು ಪೊಸಲತೆ
ಕುಡಿಬಿಟ್ಟು ಹಬ್ಬಿದಂದದೊಳು
ನಡೆನೋಡಲೊಪ್ಪುತಿದ್ದುದು ಸರಪಣಿಯೆಡೆ
ಬಿಡದೆ ಪಾಯ್ದುಳತುಂಬಿ ಹಬ್ಬಿ

ಗುಣಮಣಿಹಾರನಂಗುಲಿಯೊಳಗೊಂದು ಕುಂ
ದಣಲತೆ ಹುಟ್ಟಿ ಪಾಯ್ದುಳವ
ತಣಿಸಿ ಹಬ್ಬಿದದೆನಲಾಯ್ತು ಚಿನ್ನದ ಸರ
ಪಣಿಯೊಂದು ತೋಳ ತೋರದಲಿ

ಕಿರುವೆರಳಿಗೆ ಸರಪಣಿಯ ಸಂದಿಸಿ ರಾಯ
ಬಿರಿಸಾಗಿ ತೂಗಿರ್ಕೆಯೆಂದ
ಇರುಹೆಗಳೆಂಣೆಸೋಂಕಿದ ನೇಣ ಮುತ್ತು ವಂ
ತೆರಗಿ ಪಿಡಿದುದಾಗ ಕಟಕ

ಕುವರರು ದೊರೆಗಳು ಸಖರು ಪಿಡಿವುತಿರ
ಲವನೀಶ ಸನ್ನೆಯೊಳ್ನಿಲಿಸಿ
ವಿವಿಧಸೇನೆಗೆ ತುಯ್ವುದೆಂದು ಸನ್ನೆಯ ಮಾಡ
ಲವರು ತೆಗೆದರು ಬೊಬ್ಬಿರಿದು

ಸೇನೆ ತೆಗೆಯೇ ಬೆರಲಿನಿಸು ಮಿಸುಕದಿರ
ಲಾನೆಕುದುರೆಯೆತ್ತುಗಳಿಗೆ
ಸ್ಥಾನವರಿದು ತೊಡರಿಪುದೆಂದು ಬೆಸಸೆ ಸಂ
ಧಾನಿಸಿದರು ಸರಪಣಿಯ

ಠಮಠಮಯೆಂದು ವಾದ್ಯವ ಕುಟ್ಟಲಾಲ್ದು ಸಂ
ಭ್ರಮದಿ ತೆಗೆದರೆಲ್ಲರುಬ್ಬಿ
ಅಮರಿದ ಗದ್ದುಗೆಯಿಂದ ಜಾರದೆ ಧರಾ
ರಮಣನಿದ್ದನು ಶಕ್ತಿಯೆಂತೊ

ತೇರನೆಳೆಯಬಹುದೈಸೆ ಹಗ್ಗವ ಹಾಕಿ
ಮೇರುವನೆಳೆದರೆ ಬಹುದೆ
ಆರಾರು ಬಹುದಹುದಾ ಸೇನೆ ತೆಗೆದಾಗ
ಧೀರಾಗ್ರನಿದ್ದನಿದ್ದಂತೆ

ನರವಿಷ್ಣು ಸಡಿಲದು ತೆಗೆಯಹೇಳಧಿಕನಿ
ರ್ಭರದಿಂದ ಕಟಕವನೆಂದ
ಮುರಿದು ಪಲ್ಗಚ್ಚಿಕೊಂಡುಳ್ಳ ಶಕ್ತಿಯನಿಕ್ಕಿ
ಸರಪಣಿದುಯ್ದುದಾ ಸೇನೆ

ಕಾಲ ಪೈಸರಗೊಟ್ಟು ಸರಪಣಿವಿಡಿದು ಹಿ
ಮ್ಮಾಲಾಗಿ ಪಡೆ ತೆಗೆವಾಗ
ತೋಳ ಸೊಕ್ಕಿರೆ ರಾಯ ನೀಡಿದನುರೆ ಹೊಟ್ಟೆ
ಮೇಲಾಗಿ ಕೆಡೆದರುರ್ವಿಯೊಳು

ಕಟ್ಟಿ ಬಿಸಾಟಂತೆ ಬಿದ್ದರು ಭಟರೆತ್ತು
ಕಟ್ಟಿದಾನೆಗಳು ತೇಜಿಗಳು
ಥಟ್ಟ ಪೊಟ್ಟನೆ ಕೆಡೆದೊದೆದಾಡುತಿರೆ ರಾಯ
ನಿಟ್ಟಿಸುತಿದ್ದನು ನಗದೆ

ಏಳಹೇಳೇಕೆ ಬಿದ್ದರು ನಾನು ಸುಕ್ಕಿದ
ತೋಳ ನೀಡಿದೆನೈಸೆ ನನ್ನ
ಮಾಲಿದಂಗುಲಿಯನ್ನು ನೇರವಾಯ್ತಲ್ಲೆಂದ
ಮೇಲೆಲ್ಲರೆದ್ದರಾ ಕ್ಷಣವೆ

ಬಲುಹಾಗಿ ಹಿಡಿಯಹೇಳಾನೊಮ್ಮೆ ನನ್ನತ್ತ
ಬಲಿದು ನೋಡುವೆನೆಂದನದಕೆ
ಕಲಿಗಳು ಫಣಿಗಳ ಪಿಡಿವಂತೆ ಸರಪಣಿ
ಗಳ ಪಿಡಿದರು ದೃಢವಾಗಿ

ಸದರದೊಳಗೆ ತೆಗೆದನು ಮೊದಲೊಮ್ಮೆಮ

ತ್ತದರಿಂದ ನಸುಹೆಚ್ಚಿ ತೆಗೆದ
ಅದಕೆ ವೆಗ್ಗಳಿಸಿ ನಾಲ್ವತ್ತೆಂಟುಗಾವುದ
ಗದಗದಿಸಿತು ರಾಜಕಟಕ

ತಗಿತೊನೆದು ಮತ್ತೆ ಝುಂಕಿಸಿ ತೆಗೆದನು
ಲಾಗಿಸುವತ್ತ ಬೀರ್ವರ್ಂತೆ
ಮೂಗಡಿಯಾಗಿ ಬಿದ್ದಿತು ಸೇನೆ ಸಾಷ್ಟಾಂಗ
ವಾಗಿ ವಂದಿಸುವಂತೆ ತನಗೆ

ಮೊರಡಿಗಳಂತುರುಳಿದುವಾನೆ ತೇಜಿಗ
ಳುರುಳುತಿದ್ದುವು ಗುಂಡಿನಂತೆ
ಪರಿಸೆಯೊಂದೆ ಲಗ್ಗೆಯೊಳು ದೇವಗೆರಗಿದ
ಪರಿಯೊಳಿದ್ದುದು ಪರಿವಾರ

ಸಣ್ಣ ಬೆರಳ ಶಕ್ತಿಯಿಂತು ಪೆಬ್ಬೆಟ್ಟಿನ
ಬಿಣ್ಣಿತೆಂತುಟೊ ಮುಷ್ಟಿಯೆಂತೊ
ಬಣ್ಣದ ನುಡಿಯಲ್ಲ ಚಕ್ರಿಗುಂಟದ್ರಿಯ
ನಣ್ಣೆ ಕಲ್ಲಾಡುವ ಶಕ್ತಿ

ನರನಾಥ ತಲೆವಾಗಿ ನಸುನಕ್ಕನಾಗ ಮಿ
ತ್ರರು ಹುಸಿರೋಗವೆಂದರಿದು
ಪರರಿಂದ ಮಾಣದೊಡೆಯ ನೀನೆ ನಿನ್ನ ನು
ಣ್ಬೆರಳ ಮಾಣಿಪುದೆಂದರೊಸೆದು

ಸರಪಣಿದೆಗೆದೆಡಗೈಯಿಂದ ತನ್ನನು
ಣ್ಬೆರಳನೊತ್ತುತ ವಿನೋದಾರ್ಥಿ
ಗುರುಹಂಸನಾಥಾಯ ಸ್ವಾಹಾಯೆಂದನು ಕೂಡೆ
ಸರಿತವಾಗಿದ್ದುದಾ ಬೆರಳು

ಸುತರು ಭೂಭುಜರು ಪ್ರಧಾನಿಮಿತ್ರರು ನಕ್ಕು
ಹಿತದಿ ನಿವಾಳಿಯನಿಟ್ಟು

ನುತಿಸಿ ನಿನ್ನಯ ಮಂತ್ರಕೆಣೆಯಿಲ್ಲವೆಂದು ಭೂ
ಪತಿಗಡ್ಡ ಬಿದ್ದರುಬ್ಬಿನೊಳು

ಕಟಕವೆಲ್ಲವು ತಟಪಟನೆದ್ದು ಸಾಹಸ
ಘಟನೆಗೆ ಮೆಚ್ಚಿ ಭೂವರಗೆ
ನಟಿಸಿ ನಿವಾಳಿಯನಿಮ್ಮೊಡನೆರಗಿತು
ಕುಟಿಲವಿಲ್ಲದ ಭಕ್ತಿಯಿಂದ

ಸುರರು ಪೂಮಳೆಗರೆದರು ಮೊಳಗಿತು ಮೂರು
ವರಕೋಟಿವಾದ್ಯ ಘೋರೆಂದು
ಸುರಗಣಿಕೆಯರು ನರ್ತಿಸಿದರು ಸಾಲದೆ
ಭರತರಾಜನದೊಂದು ಭಾಗ್ಯ

ಸರಸಾರ್ಥವಿದನೇಕೆ ನೆನೆದೆ ಚಕ್ರೇಶಯೆಂ
ದುರುಮುದದೊಳು ಮಂತ್ರಿ ಕೇಳ್ದ
ಇರುಳಿಬ್ಬರಾಡಿದ ನುಡಿಗಿಂತು ನೆನೆದೆನಂ
ದರಸನಾ ಸ್ಥಿತಿಯ ಪೇಳಿದನು

ಬಡಗಣದೆಸೆಯೊಳಾಡಿದರೆಂದು ಚಕ್ರೇಶ
ನುಡಿಯಲಾ ಖಚರರು ಕೇಳಿ
ಒಡೆಯ ನಾವರಿಯದಾಡಿದೆವೆಂದು ಮುಂದಡ್ಡ
ಗೆಡೆದರು ಪಾಲಿಪುದೆಂದು

ದೆಸೆಯ ಪೇಳಿದನ್ನೈಸೆ ಹೆಸರನರಿಯನವ
ರಸು ಬೆಚ್ಚಿ ಸಾಷ್ಟಾಂಗವೆರಗೆ
ಬಿಸವಂದವಟ್ಟರೆಲ್ಲರು ಭೀತಿ ಬೇಡೇಳಿ
ರೊಸಗೆಯಯ್ತೆಂದನಾ ಚಕ್ರಿ

ಕಡೆಯ ಪಾಳೆಯದೊಳಿದ್ದವರೊಂದು ಬಿನದಕೆ
ನುಡಿದಾಡೆ ಕೇಳ್ದವ ಕಂಡು
ನಡುಮನೆಕೋಣೆಬೀದಿಗಳಲ್ಲಿ ಜಾಣ್ಮಾತ

ನುಡಿಯಲಂಜಿತು ರಾಜಕಟಕ

ನಾಡುಗರಿಗೆ ಸೇನೆದೋರಿಗೆಲ್ದನು ಯುದ್ಧ
ಮಾಡುವರಿವಗಿದಿರುಂಟೆ
ನೋಡು ಚಕ್ರಿಗೆ ಸರ್ವಬಲದಾಸೆಯೊಂದಿವ
ರಾಡಬಹುದೆಯೆಂದರೆಲ್ಲ

ಅಣುಗರು ದೊರೆಗಳು ನಾವೆಲ್ಲರಾ ಸರ
ಪಣಿವಿಡಿದರೆ ಬೀಳ್ವರೆಂದು
ಗಣಿಸಿ ನಿಲ್ಲಿಸಿದೊಂದು ಜಾಣ್ಮೆಸಾಲದೆಯೆಂದು
ಗುಣವ ಕೀರ್ತಿಸಿದರಾ ಸಖರು

ಕುವರರ ನಿಲಿಸಿದಾಗೆನಗಿದು ಸಟೆಯರ
ಗವೊಯೆಂಬುದಾಯ್ತೆಂದ ಮಂತ್ರಿ
ಅವಧಿಯ ಮೊದಲು ನಾವೀಕ್ಷಿಸಿತಿಲ್ಲೆಂದು
ಪ್ರವರವ್ಯಂತರಿಗರಾಡಿದರು

ಗಡಬಡೆ ಸಾಕು ಹೋ ಪಡೆ ನೊಂದಿತಾನೊಂದು
ನುಡಿಗಿಂತುಟಲೆದೆನೆ ಮಂತ್ರಿ
ಕಡಿಕಡಿಯಿವರಿಗಾ ಸರಪಣಿಯನೆ ಹಂಚಿ
ಕೊಡು ನೊಂದ ನೋವಾರಲೆಂದ

ಕೆಡೆದರತ್ತಿತ್ತೆಂಬುದಲ್ಲದೊಬ್ಬರ ಮೈಗ
ಳೊಡೆದುವು ದಂತಕೊಂಕಿದುವೆ
ಹುಡಿಯೆದ್ದ ನೆಲ ನಯ ಸುಖದೊಳೆದ್ದರು ಚಕ್ರಿ
ತೊಡಗಿದರ್ತಿಯೊಳುಂಟೆ ನೋವು

ಕನಕದ ತೊಡೆಹದೊಳಾ ಸರಪಣಿಯಂತೆ
ಜನಪನಿನ್ನೊಬ್ಬ ಮಾಡುವನೆ
ಕನಕದ ಸರಪಣಿಯನೆ ಕೊಡಿಸಿದನು ಕ
ಬ್ಬುನಕೆಣೆಗಂಡು ಪಾಯ್ದಳಕೆ

ಆ ಸರಪಣಿಯೊಳೊಂದೊಂದೆ ನಾಡರಸರ
ಸೇನೆಗೆ ಜನ್ಮದ ಬದುಕು
ಆ ಸುಖಿ ತುಂಡಿಸಿ ಕೊಡಿಸಿದ ಪಡೆಗೊಂದು
ಕಾಸನೊಬ್ಬೊಬ್ಬಗೀವಂತೆ

ಚಂಡಿಮಾಡಿದ ಶಿಶುಗಳಿಗೆ ಕಬ್ಬಿನದೊಂದು
ಕಂಡಿಕೆಯನುಕೊಡುವಂತೆ
ಖಂಡಿಸಿ ಸರಪಣಿಗಳ ನೊಂದ ಪಡೆಗಿಂಪು
ಗೊಂಡು ಕೊಡಿಸಿದನಾ ನೃಪತಿ

ಅವಸರಕೊದಗಿ ನಿರ್ಮಿಸಿದನ್ನೈಯೆಂದು ಮಾ
ನವಪತಿ ವಿಶ್ವಕರ್ಮನಿಗೆ
ದಿವಿಜರು ತೊಡುವ ಪಾಟಿಯ ತೊಡಿಗೆಯ ಕೊಟ್ಟ
ನವನೇನು ಮೆಚ್ಚಿಲ್ಲದರಸೆ

ಇಟ್ಟ ನಿವಾಳಿಯ ಬೆಟ್ಟಗಳನು ರಾಯ
ನಿಟ್ಟಿಸಿ ಕೈವೀಸಿಬಿಡಲು
ಭಟ್ಟರು ಯಾಚಕರಕ್ಕರಿಗರು ಹೊರೆ
ಗಟ್ಟಿ ಹೊತ್ತರು ಸೂರೆಯಾಗಿ

ಮಣಿಸರವೆನೆ ಸೇನೆಯೊಯ್ದು ಸಾಹಸವ ಕುಂ
ದಣವ ವೆಚ್ಚಿಸಿದುದಾರವನು
ಕ್ಷಣದಲ್ಲಿ ಕೃತಿಗಟ್ಟಿ ಕವಿಗಳು ಪೇಳೆ ವಂ
ನ್ನಣೆಯಿತ್ತನಾ ಸಾರ್ವಭೌಮ

ತಣಿದುದು ಕಟಕವೆಲ್ಲವು ಕೂಡೆ ಸರ್ವರ
ಗುಣವಚನದೊಳು ಬೀಳ್ಕೊಟ್ಟು
ಅಣುಗರ ಬೀಳ್ಕೊಟ್ಟು ಚಕ್ರೇಶ ಹೊಕ್ಕನಾ
ಕ್ಷಣದೊಳೆ ರಾಜಮಂದಿರವ

ಲಲನೆಯರರ್ತಿಯ ಹೇಳಲರಿಯೆ ಮೊಗ
ತಳತಳಿಸುತ ನಗುತೆಯ್ದಿ
ಗೆಲವಿನೊಳಾರತಿಯೆತ್ತಿ ನಿವಾಳಿಯಿ
ಟ್ಟೊಲಿದೆರಗಿದರೋಪನಡಿಗೆ

ಸಟೆಯ ರೋಗವೆ ನಮ್ಮ ಕಟಕವನಲೆದೆತ್ತಿ
ಪುಟನೆಗೆದೆಯೊಯೆಂದು ನಗುತ
ಕಟಕಿಯೊಳಾರತಿಯೆತ್ತಿ ವಂದಿಸಿದಳಾ
ಪುಟಕುಚೆ ಪಟ್ಟದ ರಾಣಿ

ಸ್ತ್ರೀಯರ ಹಿಂದಿಕ್ಕಿ ಬಂದು ಭೂಪತಿ ತನ್ನ
ತಾಯಂಘ್ರಿಗಳ ನಮಿಸಿದನು
ಮಾಯದ ರೋಗದೋರಿತೆ ನನ್ನ ಮಗಗೆ ಮಾ
ಮಾಯೆಂದಾಳಾಕೆ ತಕ್ಕೈಸಿ

ನಿನಗೆಂತು ರುಜೆ ಬರಬಾರದು ರುಜೆ ನಿನ್ನ
ನೆನೆದರ್ಗೆ ಬರಬೇಡವೆಂದು
ಜನನಿ ಹರಸಿ ಮುತ್ತಿನಕ್ಷತೆಯಿಟ್ಟಳು
ಬಿನದಕೆ ಮೆಚ್ಚುತ ಮಗನ

ದಿಟವಿನ್ನು ದೇವರ ಹರಕೆ ರಕ್ಷಿಪುದೆಂದು
ಚಟುಲಾಕ್ಷಿಯರುತಾಯಿವೆರಸಿ
ಪಟುಚಕ್ರಿ ಭೋಜನಕೆಯ್ದದನಿಲ್ಲಿಗೆ
ಕಟಕವಿನೋದದ ಸಂಧಿ

## ಪ್ರಶ್ನೆ ಪತ್ರಿಕೆಯ ಸ್ವರೂಪ:
## (ಮೊದಲನೇಯ ಮತ್ತು ಎರಡನೆಯ ಸೆಮಿಸ್ಟರ್‌ಗಳಿಗೆ ಇದೇ ಮಾದರಿ)

ಕನ್ನಡ ಸಾಹಿತ್ಯ ಚರಿತ್ರೆ – 40 ಅಂಕಗಳು
ಪ್ರಾಚೀನ ಕಾವ್ಯ ಭಾಗ – 40 ಅಂಕಗಳು

**ಅ. ಕನ್ನಡ ಸಾಹಿತ್ಯ ಚರಿತ್ರೆ:**

1. ಐದು ಅಂಕದ ಆರು ಪ್ರಶ್ನೆಗಳನ್ನು ಕೊಟ್ಟು ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಬೇಕು. 4×5=20

2. ಹತ್ತು ಅಂಕದ ನಾಲ್ಕು ಪ್ರಶ್ನೆಗಳನ್ನು ಕೊಟ್ಟು ಎರಡು ಪ್ರಶ್ನೆಗಳಿಗೆ ಉತ್ತರಿಸಬೇಕು. 2×10=20

**ಆ. ಪ್ರಾಚೀನ ಕಾವ್ಯ ಭಾಗ:**

1. ಭಾವಾರ್ಥಕ್ಕೆ – 6 ಅಂಕಗಳು

2. ಟಿಪ್ಪಣಿ: ನಾಲ್ಕು ಟಿಪ್ಪಣಿಗಳನ್ನು ಕೊಟ್ಟು ಎರಡನ್ನು ಉತ್ತರಿಸಬೇಕು. 2×2=4

3. ಐದು ಅಂಕದ ನಾಲ್ಕು ಪ್ರಶ್ನೆಗಳನ್ನು ಕೊಟ್ಟು ಎರಡು ಪ್ರಶ್ನೆಗಳಿಗೆ ಉತ್ತರಿಸಬೇಕು.

   2×5=10

4. ಹತ್ತು ಅಂಕದ ನಾಲ್ಕು ಪ್ರಶ್ನೆಗಳನ್ನು ಕೊಟ್ಟು ಎರಡು ಪ್ರಶ್ನೆಗಳಿಗೆ ಉತ್ತರಿಸಬೇಕು.

   2×10=20.

********

**ಪ್ರಧಾನ ಸಂಪಾದಕರು:**

**ಡಾ. ಎಂ.ಜಿ. ಮಂಜುನಾಥ್**
ಕನ್ನಡ ಪ್ರಾಧ್ಯಾಪಕರು & ಡೀನ್, ಕಲಾನಿಕಾಯ
ಮೈಸೂರು ವಿಶ್ವವಿದ್ಯಾಲಯ, ಮೈಸೂರು

**ಸಂಪಾದಕರು:**

**ಡಾ. ಎಸ್. ಎಲ್. ಮಂಜುನಾಥ**
ಕನ್ನಡ ಪ್ರಾಧ್ಯಾಪಕರು,
ವಿಜಯ ಕಾಲೇಜು, ಜಯನಗರ 4 ನೇ ಬ್ಲಾಕ್,
ಬೆಂಗಳೂರು–560011.

**ಪ್ರೊ. ಬೊಮ್ಮೇಗೌಡ**
ಕನ್ನಡ ಪ್ರಾಧ್ಯಾಪಕರು,
ವಿ.ವಿ. ಪುರಂ ಕಲೆ ಮತ್ತು ವಾಣಿಜ್ಯ ಕಾಲೇಜು,
ವಿ.ವಿ. ಪುರಂ, ಬೆಂಗಳೂರು.

**ಸೂರ್ಯಕೀರ್ತಿ (ಕೀರ್ತಿ. ಪಿ)**
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಕನ್ನಡ ಭಾಷಾ ಮತ್ತು ಸಾಹಿತ್ಯ ವಿಭಾಗ
ಸಂತ ಫ್ರಾನ್ಸಿಸ್ ಕಾಲೇಜು,
ಕೋರಮಂಗಲ, ಬೆಂಗಳೂರು– 560034